ಫೆಬ್ರವರಿ 2024

# ಸೇವಾ ವಾಣಿ

## ಸೇವಾ ಸಂಗಮ

## ಆರ್ಬಿಟ್








**ಪೂಜ್ಯ ರಾಬರ್ಟ್ ಮಿರಾಂದಾ**
**ಗುಲ್ಬರ್ಗ ಧರ್ಮಾಧ್ಯಕ್ಷರು**

**ಫಾ. ವಿಕ್ಟರ್ ವಾಸ್**
**ನಿರ್ದೇಶಕರು**

## "ವೇದವನ್ನು ಓದಿದವರು ದೋಡ್ಡವರಲ್ಲ, ಜನರ ವೇದನೆಯನ್ನು ಅರಿತವರು ದೋಡ್ಡವರು"

ಕಲಬುರಗಿ ನಗರದ ಸೇವಾಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮ್‌ಜಿ ಫೌಂಢೇಶನ ಸಂಯುಕ್ತ ಆಶ್ರಯದಲ್ಲಿ **"ಶಿಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕುರಿತು ಆಶಾ ಕಾರ್ಯಕರ್ತೆಯರಿಗೆ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂಧಿಗಳಿಗೆ ಒಂದು ದಿನದ ತರಬೇತಿ ಕಾರ್ಯಗಾರವನ್ನು ಸೇವಾ ಸಂಗಮ ಸಂಸ್ಥೆಯಲ್ಲಿ ಹಮ್ಮಿಕೋಳ್ಳಲಾಯಿತು"**. ಸಂಸ್ಥೆಯ ನಿರ್ದೇಶಕರಾದ ಫಾದರ ವಿಕ್ಟರ್ ವಾಸ್ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ ಮನುಷ್ಯನಿಗೆ ಸನ್ಮಾನ್ ದೊಡ್ಡದಲ್ಲ ಸಂಸ್ಕಾರ ದೊಡ್ಡದು, ಅದೇ ರೀತಿ ವಿದ್ಯೆ ದೊಡ್ಡದಲ್ಲ ಅನುಭವ ದೊಡ್ಡದು ಎಂದು ನಮ್ಮ ವಚನಕಾರರು ಹೇಳಿದ್ದಾರೆ. ನೀವು ನೀಡುತ್ತಿರುವ ಸೇವೆ ಜನರಿಗೆ ಆರೋಗ್ಯವಾದ ಜೀವನ ನಡೆಸಲು ಹಾಗೂ ಉತ್ತಮ ಜೀವನ ನಡೆಸಲು ಸಹಾಯವಾಗುತ್ತಿದೆ, ನೀವು ಜನರ ಮಧ್ಯದಲ್ಲಿದ್ದು ಅವರ ಜೀವನದಲ್ಲಿ ಮಹತ್ವದ ಪಾತ್ರವನ್ನು ನಿಭಾಯಿಸುತ್ತಿದ್ದಿರಿ, ಪ್ರಸ್ತುತ ಸಮಯದಲ್ಲಿ ಗ್ರಾಮೀಣ ಜನರು ಆರೋಗ್ಯವಾಗಿದ್ದಾರೆ ಎಂದರೆ ಅದಕ್ಕೆ ತಾವುಗಳೇ ಮುಖ್ಯ ಕಾರಣ, ಈ ದಿನದ ಕಾರ್ಯಗಾರ ತಮ್ಮಗೆ ನೀಡುವ ಉದ್ದೇಶವು ಕೂಡ ಜನರಿಗೆ ಇನ್ನೂ ಹೆಚ್ಚಿನ ಸೇವೆ ಒದಗಿಸುವಂತೆ ಮಾಡುವುದಕ್ಕಾಗಿದೆ, ಈ ಕಾರ್ಯಗಾರದಿಂದ ತಮ್ಮಗೆ ಬೆಳವಣಿಗೆಯಲ್ಲಿ ಕುಂಠಿತ ಮಕ್ಕಳಿಗೆ ಯಾವ ರೀತಿಯಾಗಿ ಶೀಘ್ರವಾಗಿ ಪತ್ತೆ ಹಚ್ಚುವ ಮೂಲಕ ಆರಂಭಿಕ ಶಿಕ್ಷಣವನ್ನು ಆರಂಭಿಸುವ ಸೇವೆ ನೀಡಲು ಮಾರ್ಗದರ್ಶನ ಸಿಗುತ್ತದೆ ಎಂದು ಆಶಾ ಕಾರ್ಯಕರ್ತೆಯರನ್ನು ಉದ್ದೆಶಿಸಿ ನುಡಿದರು ಹಾಗು ತರಬೇತಿಯ ಸದುಪಯೋಗವನ್ನು ಪಡೆದುಕೊಳ್ಳುವಂತೆ ಸಲಹೆ ನಿಡಿದರು.





# ನವಜೀವನ (ಎ.ಪಿ.ಎಫ್) ಕಾರ್ಯಕ್ರಮ

## "ಮಾನಸಿಕ ಅಸ್ವಸ್ಥತೆ ಕುರಿತು ಜಾಗೃತಿ ಕಾರ್ಯಕ್ರಮ"



ಜನವರಿ 09 2024 ರಂದು ಹುಮ್ನಾಬಾದ್ ತಾಲೂಕಿನ ಮರಖಲ್ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯಲ್ಲಿ ಮಕ್ಕಳಿಗೆ ಆರ್ಬಿಟ್ ಸಂಸ್ಥೆ ಹುಮ್ನಾಬಾದ್ ಹಾಗೂ ಅಜೀಂ ಪ್ರೇಮಜಿ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ನವಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಕುಮಾರ ನೀಲಕಂಠ ರವರು ಮಾನಸಿಕ ಅಸ್ವಸ್ಥರ ರೋಗದ ಕುರಿತು ಜಾಗೃತಿ ಕಾರ್ಯಕ್ರಮ ಹಮ್ಮಿಕೊಂಡಿದ್ದರು. ಮಾನಸಿಕ ಕಾಯಿಲೆ ಎಂದರೇನು? ಹೇಗೆ ಬರುತ್ತದೆ, ಲಕ್ಷಣಗಳು ಯಾವವು ಮತ್ತು ಮಾನಸಿಕ ಅಸ್ವಸ್ಥರನ್ನು ಹೇಗೆ ಪುನರ್ವಸತಿಗೊಳಿಸಬಹುದು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಸೇರಿ 47 ಜನರು ಭಾಗವಹಿಸಿದರು.

## ಮಾನಸಿಕ ಅಸ್ವಸ್ಥರ ಕುರಿತು ಅರಿವಿನ ಕಾರ್ಯಕ್ರಮ



ಜನವರಿ 09 2024 ರಂದು ಹುಮ್ನಾಬಾದ್ ತಾಲೂಕಿನ ಮಾಣಿಕನಗರ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ಬರುವ ಗಡವಂತಿ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಅಜೀಂ ಪ್ರೇಮಜಿ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ನಡೆಯುವ ನವಜೀವನ ಕಾರ್ಯಕ್ರಮದ ಆಪ್ತ ಸಮಾಲೋಚಕರಾದ ರವಿ ರವರು ಮಾನಸಿಕ ಅಸ್ವಸ್ಥರ ಸಮುದಾಯ ಆಧಾರಿತ ಪೂನರ್ವಸತಿ ಕಾರ್ಯಕ್ರಮದ ಫಲಾನುಭವಿಗಳಿಗೆ ಆಪ್ತ ಸಮಾಲೋಚನೆಗೆ ಒಳಪಡಿಸಲಾಯಿತು. ಖಿನ್ನತೆ ಒಂದು ಕಾಯಿಲೆಯಾಗಿದೆ ಹಾಗು ಅನೇಕ ಸಮಸ್ಯೆಗೆ ಕಾರಣವಾಗುತ್ತದೆ. ಆಪ್ತಸಮಾಲೋಚನೆಯ ಆಧಾರದಲ್ಲಿ ಸಮಸ್ಯೆಗೆ ಪರಿಹಾರ ಹುಡುಕುತ್ತಾ ಅಗತ್ಯವಿರುವ ವ್ಯಕ್ತಿಗಳನ್ನು ಈ ಸಮಸ್ಯಗಳಿಂದ ಹೋರಗಡೆ ತರಲು ಸ್ವಯಂಶಕ್ತಿ ವೃದ್ಧಿಪಡಿಸುವಲ್ಲಿ ಪ್ರಮುಖ ಪಾತ್ರ ನಿರ್ವಹಿಸುತದೆ. ಸರಕಾರಿ ಆಸ್ಪತ್ರೆಯಲ್ಲಿ ಉಚಿತ ತಪಾಸಣೆ ಮಾಡಿ ಔಷಧ್ಧಿಗಳನ್ನು ಪಡೆಯಲು ಹಾಗೂ ಖಿನ್ನತೆ ಎಂಬ ಕಾಯಿಲೆಯಿಂದ ಮುಕ್ತರಾಗಲು ಸೂಕ್ತ ಹಾಗು ಉಚಿತ ಚಿಕಿತ್ಸೆ ನಿಡಲಾಗುತ್ತದೆ ಎಂದು ಕುಟುಂಬದ ಸದಸ್ಯರಿಗೆ ಆತ್ಮವಿಶ್ವಾಸದ ಬಲ ತುಂಬಲಾಯಿತು.



## "ಮಾನಸಿಕ ಆರೋಗ್ಯದ ಕುರಿತು ಜಾಗೃತಿ ಕಾರ್ಯಕ್ರಮ"



ಜನವರಿ 10 2024 ರಂದು ಹುಮಾನಾಬಾದ ತಾಲ್ಲೂಕಿನ ಜನತಾನಗರ ಗ್ರಾಮದ ಸರಕಾರಿ ಪ್ರೌಢ ಶಾಲೆಯಲ್ಲಿ ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮ ಹಾಗೂ ಅಜೀಮ್ ಪ್ರೇಮ್‌ಜೀ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಆರೋಗ್ಯದ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೋಳಲಾಯಿತ್ತು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ನವಜೀವನ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ. ಪ್ರೀತಿ ರವರು ಮಾನಸಿಕ ಆರೋಗ್ಯದ ಕುರಿತು ಮಾತನಾಡುತ್ತಾ ಮಾನಸಿಕ ಆರೋಗ್ಯ ಎಂದರೇನು? ಅದರ ಲಕ್ಷಣಗಳು, ಲಭ್ಯವಿರುವ ಸೂಕ್ತ ಚಿಕಿತ್ಸೆ ಹಾಗೂ ಮಾನಸಿಕವಾಗಿ ಆರೋಗ್ಯದಿಂದ ಇರಲು ಅನುಸರಿಸಬೇಕಾದ ಜೀವನಕ್ರಮದ ಬಗ್ಗೆ ವಿವರಿಸಿದರು. ನಂತರ ಆರ್ಬಿಟ್ ಸಂಸ್ಥೆಯ ಸಹನಿರ್ದೇಶಕರು ಫಾ॥. ವಿಜಯಕುಮಾರ ಮಾನಸಿಕ ಆರೋಗ್ಯ ಕುರಿತು ಹೆಚ್ಚಿನ ಮಾಹಿತಿ ನೀಡಿದರು. ಈ ಕಾರ್ಯಕ್ರಮದಲ್ಲಿ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದು. 40 ಶಾಲಾ ಮಕ್ಕಳು ಮಾನಸಿಕ ಆರೋಗ್ಯ ಬಗ್ಗೆ ಮಾಹಿತಿ ಪಡೆದುಕೊಂಡು.

## “ಮಾನಸಿಕ ಆರೋಗ್ಯದ ಕುರಿತು ಜಾಗೃತಿ ಕಾರ್ಯಕ್ರಮ”



ಜನವರಿ 05 2024 ರಂದು ಹುಮನಾಬಾದ ತಾಲ್ಲೂಕಿನ ಸೇಡೋಳ ಗ್ರಾಮದ ಕನಕದಾಸ ಪ್ರೌಢ ಶಾಲೆಯ ಮಕ್ಕಳಿಗೆ ಮಾನಸಿಕ ಅಸ್ವಸ್ಥತೆ ಕುರಿತು ತರಬೇತಿ ನೀಡಲಾಯಿತು. ಈ ತರಬೇತಿಯಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಆರ್ಬಿಟ್ ಸಂಸ್ಥೆಯ ಸಹ ನಿರ್ದೇಶಕರಾದ ಫಾ. ವಿಜಯಕುಮಾರ್ ಭಾಗವಹಿಸಿದರು. ಮಾನಸಿಕ ಕಾಯಿಲೆ ಎಂದರೇನು? ಮಾನಸಿಕ ಆರೋಗ್ಯ ಎಂದರೇನು? ಮಾನಸಿಕ ಕಾಯಿಲೆಯ ಲಕ್ಷಣಗಳು ಹಾಗೂ ಕಾರಣಗಳು ಯಾವವು ಎಂದು ಸವಿಸ್ತಾರವಾಗಿ ತಿಳಿಸಿದರು. ಈ ಕಾಯಿಲೆಯಿಂದ ಬಳಲುತಿರುವವರು ನಿಮ್ಮ ಗ್ರಾಮದಲ್ಲಿ ಕಂಡು ಬಂದರೆ ಅವರ ಕುರಿತು ಆರ್ಬಿಟ್ ಸಂಸ್ಥೆಗೆ ಮಾಹಿತಿ ನೀಡಿ. ಮಾನಸಿಕ ಅಸ್ವಸ್ಥರನ್ನು ಆಸ್ಪತ್ರೆಗೆ ತೋರಿಸಿ ಉಚಿತವಾಗಿ ಔಷಧಿಗಳು ಹಾಗೂ ಮಾತ್ರೆಗಳನ್ನು ಪಡೆದುಕೊಂಡು ಮಾನಸಿಕ ಕಾಯಿಲೆಯಿಂದ ಪೂನರ್ವಸತಿಗೆ ತರಬಹುದು ಎಂದು ತಿಳಿಸಿದರು. ಪ್ರತಿ ಬುಧವಾರ ಮುಂಜಾನೆ 10 ಗಂಟೆಯಿಂದ ಮಧ್ಯಾನ 1 ಗಂಟೆಯವರೆಗೆ ನುರಿತ ಮನೋ ವೈದ್ಯರಿಂದ ತಪಾಸಣೆ ಪಡೆದುಕೊಳ್ಳಲು ತಿಳಿಸಿದರು. ಈ ತರಬೇತಿಯಲಿ ಶಾಲೆಯ ಮುಖ್ಯ ಗುರುಗಳಾದ ಶ್ರೀ ಸಂತೋಷ, ಸಹ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಸೇರಿ 95 ಜನರು ಭಾಗವಹಿಸಿದರು.

## “ಮೂಡನಂಬಿಕೆ ಹೊಗಲಾಡಿಸಿ ಉತ್ತಮ ಜೀವನ”



ಜನವರಿ 10 2024 ರಂದು ಚಿಟ್ಟಗುಪ್ಪಾ ತಾಲೂಕಿನ ಮಂಗಲಗಿ ಗ್ರಾಮದ ಸರಕಾರಿ ಪ್ರೌಢ ಶಾಲೆಯಲ್ಲಿ ಆರ್ಬಿಟ್ ಸಂಸ್ಥೆ ಹುಮ್ನಾಬಾದ್ ಮತ್ತು ಅಜೀಮ್ ಪ್ರೇಮ್‌ಜೀ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ನಡೆಯುವ ನವಜೀವನ ಕಾರ್ಯಕ್ರಮದ ಅಡಿಯಲ್ಲಿ ಮಾನಸಿಕ ಆರೋಗ್ಯ ಕುರಿತು ಜಾಗೃತಿ ಕಾರ್ಯಕ್ರಮ ನಡೆಸಲಾಯಿತು. ನವಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಅರುಣಕುಮಾರ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡುತ್ತಾ, ಮಾನಸಿಕ ಆರೋಗ್ಯ ಎಂದರೇನು? ಲಕ್ಷಣಗಳು ಹಾಗು ಉಪಚಾರದ ಬಗ್ಗೆ ಮಾಹಿತಿ ತಿಳಿಸುತ್ತಾ ಈ ಕಾಯಿಲೆ ಬಂದರೆ ಭಯಪಡದೆ, ಮೂಡನಂಬಿಕೆಗೆ ಬಲಿಯಾಗದೆ ಸೂಕ್ತ ಸಮಯದಲ್ಲಿ ಕಾಯಿಲೆಯನ್ನು ಗುರುತಿಸಿ ಚಿಕಿತ್ಸೆ ಪಡೆಯುವಂತೆ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಒಟ್ಟು 99 ಮಕ್ಕಳು ಭಾಗವಹಿಸಿ ಮಾಹಿತಿ ಪಡೆದುಕೊಂಡರು.



ಜನವರಿ 10 2024 ರಂದು ಹುಮ್ನಾಬಾದ್ ನಗರದ ಉಪಾರ ಓಣಿಯಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಅಜೀಂ ಪ್ರೇಮಜಿ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ನಡೆಯುತ್ತಿರುವ ನವಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಲೋಕೆಶ ಮಾನಸಿಕ ಅಸ್ವಸ್ಥರ ಜಾಗೃತಿ ಕಾರ್ಯಕ್ರಮ ಕುರಿತು ಮಾತನಾಡುತ್ತಾ, ಮಾನಸಿಕ ಕಾಯಿಲೆ ಬರಲು ಕಾರಣ, ಲಕ್ಷಣ ಹಾಗು ಉಪವಾರದ ಕುರಿತು ವಿವರಿಸಿದರು, ಹೇಗೆ ಬರುತ್ತದೆ ಎಂದು ತಿಳಿಸಿದರ. ಮೂಡನಂಬಿಕೆ ಬಿಟ್ಟು ವೈಜ್ಞಾನಿಕ ಮನೋಭಾವಾ ಬೆಳೆಸಿಕೊಳ್ಳಬೇಕು, ಮಾನಸಿಕ ರೋಗವು ಮನೋವೈದ್ಯರಿಂದ ಸೂಕ್ತ ಚಿಕಿತ್ಸೆ ಪಡೆಯುವದರಿಂದ ಗುಣಮುಖ ಹೊಂದಬಹುದು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಒಟ್ಟು 11 ಜನರು ಭಾಗವಹಿಸಿ ಮಾಹಿತಿ ಪಡೆದುಕೊಂಡರು.




ಜನವರಿ 4 2024 ರಂದು ಚಿಟಗುಪ್ಪಾ ಪಟ್ಟಣದಲ್ಲಿ ಆರ್ಬಿಟ್ ಸಂಸ್ಥೆ ಹುಮ್ನಾಬಾದ್ ಹಾಗೂ ಅಜೀಮ್ ಪ್ರೇಮ್‌ಜೀ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ ಮೆಹೆಕ ಮಹಿಳಾ ಸ್ವ-ಸಹಾಯ ಸಂಘದ 12 ಸದಸ್ಯರಿಗೆ ಶ್ರೀ ಹಣಮಂತ ರವರು ಮಾತನಾಡುತ್ತಾ ಆರ್ಬಿಟ್ ಸಂಸ್ಥೆಯು ನಡೆಸುವ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ತಿಳಿಸುತ್ತಾ ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಕಾರ್ಯಕ್ರಮ ನೀಡಿದರು. ಮಾನಸಿಕ ಅಸ್ವಸ್ಥರನ್ನು ಗುರುತಿಸಿ ಸರಕಾರಿ ಆಸ್ಪತ್ರೆಯಲ್ಲಿ ಉಚಿತವಾಗಿ ತಪಾಸಣೆ ಮಾಡಿಸಿ ಮಾತ್ರೆಗಳನ್ನು ತೆಗೆದುಕೊಳ್ಳಲು ತಿಳಿಸಿದರು. ನಿಮ್ಮ ಗಮನಕ್ಕೆ ಮಾನಸಿಕವಾಗಿ ಬಳಲುತಿರುವವರು ಕಂಡುಬಂದರೆ ಆರ್ಬಿಟ್ ಸಂಸ್ಥೆಯ ಉಚಿತ ಸಹಾಯವಾಣಿಗೆ ಕರೆಮಾಡಲು ತಿಳಿಸಿದರು.

# ಮಹಿಳಾಭಿವೃದ್ಧಿ ಕಾರ್ಯಕ್ರಮ

## "ಸಂವಿಧಾನಿಕ ಹಕ್ಕುಗಳ ತರಬೇತಿ"



ಹುಮನಾಬಾದ ತಾಲೂಕಿನ ಹುಡಗಿ ಗ್ರಾಮದಲ್ಲಿ ಜನೆವರಿ 13 2024 ರಂದು ಆರ್ಬಿಟ್ ಸಂಸ್ಥೆಯ ಮಹಿಳಾಭಿವೃದ್ಧಿ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ಸಬಿತಾ ಸಂವಿಧಾನಿಕ ಹಕ್ಕುಗಳ ಕುರಿತು ತರಬೇತಿಯನ್ನು ಹಮ್ಮಿಕೋಂಡಿದರು. ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಪ್ರಭು ಮಾಲೆಯವರು ಮಾತನಾಡುತ್ತಾ ಸ್ವ–ಸಹಾಯ ಸಂಘದ ಸದಸ್ಯರಿಗೆ ಸಂವಿಧಾನ ಎಂದರೆನು? ಡಾ. ಬಾಬಾ ಸಹೇಬ್ ಅಂಬೇಡ್ಕರ್ ಅವರು ಎಲ್ಲಾ ಧರ್ಮದವರಿಗೂ ಒಂದೇ ಸಂವಿಧಾನವನ್ನು ರಚಿಸಿದ್ದಾರೆ. ಅದರಲ್ಲಿ ಮಹಿಳೆಯರಿಗೆ ಸಮಾಜದಲ್ಲಿ ಉತ್ತಮ ಸ್ಥಾನಮಾನ ಕಲ್ಪಿಸುವಲ್ಲಿ ಅವರ ಪಾತ್ರ ಮಹತ್ವದಾಗಿದೆ, ಹಿಂದಿನ ಕಾಲದಲ್ಲಿ ರಾಜ ಮನೆತನದವರೇ ಆಳ್ವಿಕೆಯನ್ನು ನಡೆಸುತ್ತಿದ್ದರು ಆದರೆ ಸಂವಿಧಾನ ರಚನೆಯ ಬಳಿಕ ಎಲ್ಲರೂ ಸಮಾನರು. ಪ್ರತಿಯೊಬ್ಬರು ಶಿಕ್ಷಣವನ್ನು ಪಡೆಯಬೇಕು, ರಾಜಕಿಯದಲ್ಲಿ ಭಾಗವಹಿಸಬೇಕು, ಮಕ್ಕಳಿಂದ ವಯಸ್ಕರ ವರೆಗೂ ಕಾನೂನು ರಚನೆಗೊಂಡಿವೆ. ಪ್ರಜೆಗಳಿಂದ ಪ್ರಜೆಗಳಿಗಾಗಿ ಪ್ರಜೆಗಳಿಗೋಸ್ಕರ ಇರುವ ಸರ್ಕಾರದ ವ್ಯವಸ್ಥೆಯನ್ನು ಪ್ರಜಾಪ್ರಭುತ್ವ ಸರಕಾರ ಎಂದು ಕರೆಯುತ್ತಾರೆ. ಸಂವಿಧಾನದಲ್ಲಿ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಮೂರು ಅಂಗಗಳು ಕಾನೂನು ಅಡಿಯಲ್ಲಿ ರಚಿಸಲ್ಪಟ್ಟಿವೆ. ಸಂವಿಧಾನಿಕ ಹಕ್ಕುಗಳು ಉಲ್ಲಂಘನೆ ಆಗದಂತೆ ತಡೆಯಲು ಇವುಗಳು ಕಾರ್ಯನಿರ್ವಹಿಸುತ್ತವೆ ಎಂದು ತಿಳಿಸಿದರು. ತರಬೇತಿಯಲ್ಲಿ 15 ಸದಸ್ಯರು ಭಾಗವಹಿಸಿ ಸಂವಿಧಾನದ ಮಹತ್ವದ ಕುರಿತು ಮಾಹಿತಿಯನ್ನು ಪಡೆದುಕೊಂಡರು.

## "ರಾಜ್ಯ ಒಕ್ಕೂಟದ ಪರಿಕಲ್ಪನೆ ಕುರಿತು ಮಾಹಿತಿ



ಹುಮನಾಬಾದ ಪಟ್ಟಣದ ಆರ್ಬಿಟ್ ಸಂಸ್ಥೆಯಲ್ಲಿ ಜನವರಿ 09 2024 ರಂದು ಮಹಿಳಾ ಅಭಿವೃಧಿ ಯೋಜನೆಯ ಸಿಬ್ಬಂದಿ ವರ್ಗದವರಿಗೆ ರಾಜ್ಯ ಒಕ್ಕೂಟದ ಪರಿಕಲ್ಪನೆ ಕುರಿತು ಮಾಹಿತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಮಹಿಳಾ ಸಬಲೀಕರಣ ಯೋಜನೆಯ ಅಡಿಯಲ್ಲಿ ಬರುವ ಐದು ಕ್ಷೇತ್ರಗಳಾದ ಆರ್ಥಿಕ, ಸಾಮಾಜಿಕ, ರಾಜಕೀಯ, ಶೈಕ್ಷಣಿಕ ಹಾಗೂ ಸಂಸ್ಕೃತಿಕ ಕ್ಷೇತ್ರಗಳಲ್ಲಿ ಯಾವ ರೀತಿ ಕೆಲಸ ಮಾಡಬಹುದೆಂದು ತಿಳಿಸಲಾಯಿತು. ಈ ತರಬೇತಿಯಲ್ಲಿ ಆರ್ಬಿಟ್ ಸಂಸ್ಥೆಯ ಸಹ ನಿರ್ದೇಶಕರಾದ ವಂದನೀಯ ಫಾದರ್ ವಿಜಯಕುಮಾರ್, ಕಾರ್ಯಕ್ರಮಗಳ ವ್ಯವಸ್ಥಾಪಕರಾದ ಸಿಸ್ಟರ್ ವಿಲ್ಮಾ ಮ್ಯಾಥ್ಯೂ, ಮಹಿಳಾ ಸಬಲೀಕರಣದ ಸಂಯೋಜಕರಾದ ಶ್ರೀಮತಿ ನಿರ್ಮಲಾ, ಸ್ಥಳಿಯ ಸಂಯೋಜಕರು, ಸಿಬ್ಬಂದಿ ವರ್ಗದವರು ಹಾಗೂ ರಾಜ್ಯ ಒಕ್ಕೂಟದ ಮೂರು ಪದಾಧಿಕಾರಿಗಳು ಉಪಸ್ಥಿತರಿದ್ದರು. ಪದಾಧಿಕಾರಿಗಳು ರಾಜ್ಯ ಒಕ್ಕೂಟದ ಪರಿಕಲ್ಪನೆ ಬಗ್ಗೆ ತಿಳಿದುಕೊಂಡು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ಕಾರ್ಯಕ್ಷೇತ್ರದಲ್ಲಿ ಮಾಡಿದ ಕೆಲಸಕಾರ್ಯಗಳ ಬಗ್ಗೆ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

## "ಸಂಘ ಮತ್ತು ಮಹಾಸಂಘದ ಮಹಿಳೆಯರಿಗೆ ಮಾಧ್ಯಮ ಶಿಕ್ಷಣ ಕುರಿತು ತರಬೇತಿ"

ಜನೆವರಿ 24 2024 ರಂದು ಕೋಸಂ ಗ್ರಾಮದ ಗೋಪಾಬಾಯಿ ಅವರ ಮನೆಯಲ್ಲಿ ಸಂಘ ಮತ್ತು ಮಹಾಸಂಘದ ಮಹೀಳೆಯರಿಗೆ ಮಾಧ್ಯಮ ಶಿಕ್ಷಣ ಕುರಿತು ತರಬೇತಿ ನೀಡಿದರು. ಸ್ಥಳಿಯ ಸಂಯೋಜಕರಾದ ಸಿಸ್ಟರ್ ಜೀವಲತಾ ಮಾತನಾಡುತ್ತಾ ಡೇಟಾವನ್ನು ಸಂಗ್ರಹಿಸಲು ಮಾಹಿತಿಯನ್ನು ನೀಡಲು ಮತ್ತು ತಲುಪಿಸಲು ಬಳಸುವ ಸಂವಹನ ಸಾಧನವೇ ಮಾಧ್ಯಮ ಶಿಕ್ಷಣ ಎಂದು ತಿಳಿಸಿದರು. ಇಂಟರ್ನೆಟ್, ದೂರದರ್ಶನ, ದಿನಪತ್ರಿಕೆ, ರೇಡಿಯೋ, ಸಿನಿಮಾ, ಜಾಹೀರಾತು ಮುಂತಾದವುಗಳು ಮಾಧ್ಯಮ ಶಿಕ್ಷಣದ ಪ್ರಕಾರಗಳಿವೆ ಎಂದು ತಿಳಿಸಿದರು. ಈ ತರಬೇತಿಯಲ್ಲಿ 25 ಮಹಿಳೆಯರು ಭಾಗವಹಿಸಿದರು.



## “ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮ”



ಭಾಲ್ಕಿ ತಾಲೂಕಿನ ಭಾಗ್ಯನಗರ್ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಜನವರಿ 13 2024 ರಂದು ಆರ್ಬಿಟ್ ಸಂಸ್ಥೆಯ ಮಹಿಳಾ ಸಬಲೀಕರಣ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ಸುಜಾತ ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮ ಹಮ್ಮಿಕೊಡಿದ್ದರು. ಕ್ಯಾನ್ಸರ್ ಎಂದರೇನು? ಲಕ್ಷಣಗಳು, ಹೇಗೆ ಬರುತ್ತದೆ ಹಾಗೂ ಕ್ಯಾನ್ಸರ್ ರೋಗದಿಂದ ಹೇಗೆ ಕಾಪಾಡಿಕೊಳ್ಳಬೇಕು ಎಂದು ತಿಳಿಸುತ್ತಾ ಮಕ್ಕಳಿಗೆ ಅತಿಯಾಗಿ ಪ್ಲಾಸ್ಟಿಕ್ ಬಳಕೆ ಮಾಡುವುದರಿಂದ ಕ್ಯಾನ್ಸರ್ ರೋಗಕ್ಕೆ ಕಾರಣವಾಗಬಹುದು. ಕ್ಯಾನ್ಸರ್ ತಡೆಗಟ್ಟಲು ಪ್ಲಾಸ್ಟಿಕ್ ಮಿತವಾಗಿ ಬಳಸುವುದು ಬಹಳ ಮುಖ್ಯವಾಗಿದೆ. ಮನೆಯಲ್ಲಿಯೇ ತರಕಾರಿಗಳನ್ನು ಬೆಳೆಸಿ ಆಹಾರಕ್ಕೆ ಉಪಯೋಗಿಸಬೇಕು, ಜೈವಿಕ ಗೊಬ್ಬರ ಬಳಸುವುದರೊಂದಿಗೆ ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕೆಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಶಾಲಾ ಶಿಕ್ಷಕರು ಮತ್ತು ಮಕ್ಕಳು ಸೇರಿ ಒಟ್ಟು 70 ಜನ ಭಾಗವಹಿಸಿದರು.

## ಒತ್ತಡ ನಿರ್ವಹಣೆಯ ಬಗ್ಗೆ ತರಬೇತಿ”



ಜನವರಿ 11 ಮತ್ತು 12 2024 ರಂದು ಧಾರವಾಡ ಜಿಲ್ಲೆಯಲ್ಲಿ ಕ್ರಾಸ್ ಸಂಸ್ಥೆಯ ನೇತೃತ್ವದಲ್ಲಿ ಮೂರು ಸಹಭಾಗಿ ಸಂಸ್ಥೆಯವರಿಗೆ ಒತ್ತಡ ನೀರ್ವಹಣೆಯ ಕುರಿತು ತರಬೇತಿ ಕಾರ್ಯಗಾರ ಹಮ್ಮಿಕೊಳ್ಳಲಾಯಿತು. ಈ ತರಬೇತಿಯಲ್ಲಿ ಆರ್ಬಿಟ್ ಸಂಸ್ಥೆಯಿಂದ ಎಂಟು ಜನ ಮಹಾಸಂಘದ ಪದಾಧಿಕಾರಿಗಳು ಭಾಗವಹಿಸಿದರು. ಒತ್ತಡಕ್ಕೆ ಒಳಗಾದಗ ನಾವು ಯಾವರೀತಿ ಪರಿಹಾರವನ್ನು ಕಂಡುಕೊಳ್ಳಬೇಕು ಎಂಬುದರ ಕುರಿತು ತರಬೇತಿಯಲ್ಲಿ ಮಾಹಿತಿ ಪಡೆದುಕೊಂಡರು. ನಮ್ಮ ಸಂಘ ಮತ್ತು ಮಹಾಸಂಘಗಳ ಸದಸ್ಯರ ವೈಯಕ್ತಿಕ ಜೀವನದಲ್ಲಿ ಒತ್ತಡ ಉಂಟಾದಾಗ ಅದಕ್ಕೆ ಮೂಲ ಕಾರಣವನ್ನು ಹುಡುಕಿ ಪರಿಹಾರ ಕಂಡುಕೊಳ್ಳುವಲ್ಲಿ ಮುಂದಾಗಬೇಕು ಎಂಬುದರ ಕುರಿತು ತಿಳಿದುಕೊಂಡು ನಾಯಕತ್ವದ ಜವಾಬ್ದಾರಿಯನ್ನು ಅರಿತುಕೊಂಡರು. ತರಬೇತಿಯಲ್ಲಿ ತಿಳಿದುಕೊಂಡ ವಿಷಯವನ್ನು ತಮ್ಮ ಮಹಾಸಂಘದಲ್ಲಿ ಪದಾಧಿಕಾರಿಗಳೊಂದಿಗೆ ಚರ್ಚೆಮಾಡಿ ಹಂಚಿಕೊಂಡರು.



## “ಮಾಧ್ಯಮ ಶಿಕ್ಷಣದ ಕುರಿತು ತರಬೇತಿ”



ಜನವರಿ 13 2024 ರಂದು ಬಸವಕಲ್ಯಾಣದ ಆಶ್ರಯ ಕಾಲೋನಿಯಲ್ಲಿ ಆರ್ಬಿಟ್ ಸಂಸ್ಥೆಯ ಮಹಿಳಾಭಿವೃದ್ಧಿ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ಕಲ್ಪನಾ ಮಾಧ್ಯಮ ಶಿಕ್ಷಣದ ಕುರಿತು ತರಬೇತಿ ನೀಡಿದರು. ಸಂಪನ್ಮೂಲ ವ್ಯಕ್ತಿಯಾಗಿ ಮಹಿಳಾಭಿವೃದ್ಧಿ ಕಾರ್ಯಕ್ರಮದ ಸ್ಥಳಿಯ ಸಂಯೋಜಕರಾದ ಸಿಸ್ಟರ್ ಏಡ್ನಾ ಮಾಧ್ಯಮ ಶಿಕ್ಷಣದ ಕುರಿತು ಮಾತನಾಡಿದರು. ಯಾವುದೆ ಒಂದು ಮಾಹಿತಿ ಸಂಗ್ರಹಿಸಲು ಮತ್ತು ತಲುಪಿಸಲು ಬಳಸುವ ಸಂವಹನ ಸಾಧನವಾಗಿದೆ. ಮಾಧ್ಯಮ ಎನ್ನುವದು ನಮಗೆ ಪ್ರಸ್ತುತ ವಿಷಯ ಹಾಗೂ ಸಂಗತಿಗಳನ್ನು ತಿಳಿದುಕೊಳ್ಳಲು ಮತ್ತು ಕಡಿಮೆ ಸಮಯದಲ್ಲಿ ಹೆಚ್ಚಿನ ಪ್ರೇಕ್ಷಕರನ್ನು ತಲುಪಲು ಸಹಾಯ ಮಾಡುತ್ತದೆ. ಮಾಧ್ಯಮವು ಸಮಾಜದಲ್ಲಿ ಎಲ್ಲದಕ್ಕೂ ಮಧ್ಯಸ್ಥಿಕೆ ವಹಿಸುತ್ತದೆ ಹಾಗು ಅಪಾರ ಜ್ಞಾನ ಮತ್ತು ಮಾಹಿತಿ ರವಾನಿಸುತ್ತದೆ. ಉದಾರಣೆ:– ಇಂಟರ್ನೆಟ್, ದಿನಪತ್ರಿಕೆ, ದೂರದರ್ಶನ, ಮ್ಯಾಗಜಿನ್ ಹಾಗೂ ರೇಡಿಯೋ ಮುಂತಾದವುಗಳು. ಪ್ರಸ್ತುತ ಶಿಕ್ಷಣಕ್ಕೆ ಮಾಧ್ಯಮವು ಪ್ರಾಮುಖ್ಯವಾಗಿದೆ ಎಂದು ತಿಳಿಸಿದರು. ಈ ತರಬೇತಿಯಲ್ಲಿ 15 ಜನರು ಭಾಗವಹಿಸಿ ಮಾಹಿತಿಯನ್ನು ಪಡೆದುಕೊಂಡರು.

# ನವಜೀವನ (ಎಲ್.ಎಲ್.ಎಲ್.ಎಫ್) ಕಾರ್ಯಕ್ರಮ

## “ಮಾನಸಿಕ ಅಸ್ವಸ್ಥರ ಜಾಗೃತಿ ಕಾರ್ಯಕ್ರಮ”



ಜನವರಿ 19 2024 ರಂದು ಔರಾದ ಪಟ್ಟಣದ ಗುಲಶನ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆರ್ಬಿಟ್ ಸಂಸ್ಥೆ ಹುಮ್ನಾಬಾದ್ ಹಾಗೂ ಎಲ್.ಎಲ್.ಎಲ್.ಎಫ್ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಅಸ್ವಸ್ಥರ ಜಾಗೃತಿ ಕಾರ್ಯಕ್ರಮ ಹಮ್ಮಿಕೋಳ್ಳಲಾಯಿತ್ತು. ನವಜೀವನ ಕಾರ್ಯಕರ್ತರಾದ ರಫಿಕ್ ಮಾತನಾಡುತ್ತಾ ಮಾನಸಿಕ ಆರೋಗ್ಯ ಎಂದರೇನು? ಕಾಯಿಲೆಯ ಲಕ್ಷಣಗಳು. ಮಾನಸಿಕ ಕಾಯಿಲೆಗೆ ಸಂಬಂಧಿಸಿದ ಚಿಕಿತ್ಸೆ ಬಗ್ಗೆ ವಿವರವಾಗಿ ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯ ಗುರುಗಳು ಸಹ ಶಿಕ್ಷಕರು ಹಾಗೂ ಮಕ್ಕಳು ಸೇರಿ 75 ಜನರು ಭಾಗವಹಿಸಿದರು.

## “ಮಾನಸಿಕ ಆರೋಗ್ಯ ಕುರಿತು ಜಾಗೃತಿ”



ಜನವರಿ 23. 2024 ರಂದು ಭಾಲ್ಕಿ ತಾಲ್ಲೂಕಿನ ನಿಟ್ಟೂರು ಗ್ರಾಮದ ಸರ್ಕಾರಿ ಪ್ರೌಢ ಶಾಲೆಯಲ್ಲಿ ಆರ್ಬಿಟ್ ಸಂಸ್ಥೆ ಹುಮ್ನಾಬಾದ್ ಹಾಗೂ ಎಲ್.ಎಲ್.ಎಲ್.ಎಫ್ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಆರೋಗ್ಯ ಕುರಿತು ಜಾಗೃತಿ ಕಾರ್ಯಕ್ರಮ ಹಮ್ಮಿಕೋಳ್ಳಲಾಯಿತ್ತು. ನವಜೀವನದ ಕಾರ್ಯಕರ್ತರಾದ ಶ್ರೀ ಲೊಹೇಶ ಮಾತನಾಡುತ್ತ ಮಾನಸಿಕ ಆರೋಗ್ಯ ಎಂದರೇನು? ಮಾನಸಿಕ ಅಸ್ವಸ್ಥರು ಅಂದರೆ ಯಾರು? ಕಾಯಿಲೆಯ ಲಕ್ಷಣಗಳ ಬಗ್ಗೆ ತಿಳಿಸಿದರು. ಜನರಲ್ಲಿರುವ ಮೂಢನಂಬಿಕೆಯನ್ನು ಮನೋಭಾವನೆಯನ್ನು ತೆಗೆದು ಹಾಕಿ ವೈಜ್ಞಾನೀಕ ಮನೊಭಾವ ಬೆಳೆಸಿಕೊಳ್ಳುವಂತೆ ಸಲಹೆ ನೀಡುತ್ತಾ ತಜ್ಞಮನೋವೈದ್ಯರೊಂದಿಗೆ ಸಮಾಲೋಚಿಸುವುದರೊಂದಿಗೆ ಮಾನಸಿಕ ಅಸ್ವಸ್ಥರನ್ನು ಪುರ್ನವಸತಿಗೊಳಿಸಬಹುದು ಎಂದು ತಿಳಿಸಿದರು.

## “ಸರಕಾರಿ ಆಸ್ಪತ್ರೆಯಲ್ಲಿ ಡಿ.ಎಮ್.ಎಚ್.ಪಿ ಕ್ಯಾಂಪ್”



ಜನವರಿ 09 2024 ರಂದು ಭಾಲ್ಕಿ ತಾಲೂಕಿನ ಸರಕಾರಿ ಆಸ್ಪತ್ರೆಯಲ್ಲಿ ನಡೆಯುವ ಡಿ.ಎಮ್.ಎಚ್.ಪಿ ಶಿಬಿರದಲ್ಲಿ ಭಾಗವಹಿಸಲಾಯಿತು. ಆರ್ಬಿಟ್ ಸಂಸ್ಥೆಯ ನವಜೀವನ (ಎಲ್.ಎಲ್.ಎಲ್.ಎಫ್) ಕಾರ್ಯಕ್ರಮದ ಕಾರ್ಯಕರ್ತರಿಂದ ಹೊಸದಾಗಿ ಪತ್ತೆ ಹಚ್ಚಿದ ಒಟ್ಟು 27 ಮಾನಸಿಕ ಅಸ್ವಸ್ಥ ಫಲಾನುಭವಿಗಳಿಗೆ ತಪಾಸಣೆ ಒಳಪಡಿಸಲಾಯಿತ್ತು. ಮನೋವೈದ್ಯರ ಬಳಿ ತಪಾಸಣಗೆ ಒಳಪಡಿಸಿ ಔಷಧಿ ಕೊಡಿಸಲಾಯಿತು. ಪ್ರತಿ ತಿಂಗಳು ತಪ್ಪದೆ ಕ್ಯಾಂಪಿಗೆ ಹಾಜರಾಗುವಂತೆ ಮತ್ತು ಪ್ರತಿದಿನ ಮಾತ್ರೆಗಳನ್ನು ಸೇವಿಸುವಂತೆ ತಿಳಿಸಲಾಯಿತು.

## “ಸರ್ಕಾರಿ ಶಾಲೆಯಲಿ ಮಾನಸಿಕ ಆರೋಗ್ಯದ ಅರಿವಿನ ಕಾರ್ಯಕ್ರಮ”



ಜನೆವರಿ 18 2024 ರಂದು ಔರಾದ ತಾಲೂಕಿನ ಕೌಡಗಾಂವ ಸರ್ಕಾರಿ ಶಾಲೆಯಲ್ಲಿ ಆರ್ಬಿಟ್ ಸಂಸ್ಥೆ ಹುಮ್ನಾಬಾದ್ ಹಾಗೂ ಎಲ್.ಎಲ್.ಎಲ್.ಎಫ್ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ಶಾಲಾ ಮಕ್ಕಳಿಗೆ ಮಾನಸಿಕ ಆರೋಗ್ಯದ ಕುರಿತು ಜಾಗೃತಿ ನೀಡಲಾಯಿತು. ಸಂಪನ್ಮೂಲ ವ್ಯಕ್ತಿಯಾದ ನವಜೀವನದ ಕಾರ್ಯಕ್ರಮದ ಕಾರ್ಯಕರ್ತರಾದ ರಫಿಕ್ ಮಾತನಾಡುತ್ತಾ ಮಾನಸಿಕವಾಗಿ ಅನಾರೋಗ್ಯದಿಂದ ಬಳಲುತ್ತಿರುವವರು ನಿಮ್ಮ ಅಕ್ಕ-ಪಕ್ಕದಲ್ಲಿ ಅಥವಾ ಗ್ರಾಮದಲ್ಲಿ ಯಾರಾದರು ಕಂಡು ಬಂದರೆ ಅಂಥವರನ್ನು ಆರ್ಬಿಟ್ ಸಂಸ್ಥೆಯ ಸಹಾಯವಾಣಿಗೆ ಅಥವಾ ಕಾರ್ಯಕರ್ತರಿಗೆ ಮಾಹಿತಿ ನೀಡುವುದು ಹಾಗೂ ಅವರನ್ನು ನುರಿತ ವೈದ್ಯರಿಂದ ತಪಾಸಣೆಗೆ ಒಳಪಡಿಸಿ, ಸೂಕ್ತ ಚಿಕಿತ್ಸೆ ನೀಡಲಾಗುವುದು. ಈ ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯ ಗುರುಗಳು ಸಹ ಶಿಕ್ಷಕರು ಹಾಗೂ ಮಕ್ಕಳು ಸೇರಿ 142 ಜನರು ಭಾಗವಹಿಸಿದರು.

## "ಮಾನಸಿಕ ಅಸ್ವಸ್ಥರ ಜಾಗೃತಿ ಕಾರ್ಯಕ್ರಮ"



ಜನವರಿ 19 2024 ರಂದು ನಾಗಮಾರಪಳ್ಳಿ ಗ್ರಾಮದ ಸರಕಾರಿ ಪ್ರೌಢ ಶಾಲೆಯಲ್ಲಿ ಆರ್ಬಿಟ್ ಸಂಸ್ಥೆಯ ನವಜೀವನ ಹಾಗೂ ಎಲ್.ಎಲ್.ಎಲ್. ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಅಸ್ವಸ್ಥರ ಜಾಗೃತಿ ಕಾರ್ಯಕ್ರಮ ನಡೆಸಲಾಯಿತ್ತು. ಆರ್ಬಿಟ್ ಸಂಸ್ಥೆಯ ಮಹಿಳಾಭಿವೃದ್ಧಿ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಸುಭಾಷ್ ಮಾನಕಾರೆ ಅವರು ಪ್ರಾಸ್ತವಿಕ ನುಡಿಯನ್ನು ನುಡಿದರು. ಶ್ರೀ ತುಳಸಿರಾಮ ಬೇಂದ್ರೆ ಶಾಲೆಯ ಮುಖ್ಯೋಪಾದ್ಯಾಯರು ಮಾತನಾಡಿ ಮಾನಸಿಕ ಅಸ್ವಸ್ಥರು ಅಂದರೆ ಯಾರು, ಅದು ಹೇಗೆ ಬರುತ್ತದೆ, ಮಾನಸಿಕ ಅಸ್ವಸ್ಥರ ಲಕ್ಷಣಗಳ ಬಗ್ಗೆ ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಆರ್ಬಿಟ್ ಸಂಸ್ಥೆಯ ನವಜೀವನ (ಎಲ್.ಎಲ್.ಎಲ್.ಎಫ್) ಕಾರ್ಯಕ್ರಮದ ಕಾರ್ಯಕರ್ತರಾದ ಶಿವಕಾಂತ ಉಪಸ್ಥಿತರಿದ್ದರು. ಶಾಲಾ ಶಿಕ್ಷಕರು ಮಕ್ಕಳು ಸೇರಿ ಒಟ್ಟು 130 ಜನರು ಭಾಗವಹಿಸಿದರು.

# ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ

## "ಪೌಷ್ಟೀಕ ಆಹಾರ ಜೀವನಕೆ ಆಧಾರ"



ಜನವರಿ 10 2024 ರಂದು ಬಸವಕಲ್ಯಾಣ ತಾಲೂಕಿನ ರಾಜೇಶ್ವರ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮದ ಕಾರ್ಯಕರ್ತೆಯಾದ ಕವಿತ 17 ಜನ ಅಂಗನವಾಡಿ ಕಾರ್ಯಕರ್ತೆಯರಿಗೆ ಮತ್ತು 8 ಜನ ಗ್ರಾಮ ಪಂಚಾಯತ್ ಸದಸ್ಯರಿಗೆ, ಪೌಷ್ಟಿಕ ಆಹಾರದ ಬಗ್ಗೆ ಜಾಗೃತಿ ಕಾರ್ಯಕ್ರಮವನ್ನು ನೀಡಿದರು. ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಕ್ಕಳಿಗೆ ನ್ಯೂನತೆಯನ್ನು ಕಂಡು ಹಿಡಿದು ಚಟುವಟಿಕೆ ಮಾಡಿಸಿದರೆ ಮಕ್ಕಳಲ್ಲಿ ನಾವು ಬದಲಾವಣೆ ಕಾಣಬಹುದು ಹಾಗೂ ಅವರಿಗೆ ಸರಕಾರದಿಂದ ಸಿಗುವ ಸೌಲಭ್ಯಗಳ ಕುರಿತು ಮಾಹಿತಿ ನೀಡಿದರು. ಮಕ್ಕಳಿಗೆ ಸರಿಯಾದ ಸಮಯಕ್ಕೆ ಆಹಾರವನ್ನು ಸೇವನೆ ಮಾಡಿಸಬೇಕು. ಮತ್ತು ತಾಯಿ ಗರ್ಭವಸ್ಥೆಯಲ್ಲಿ ಇದ್ದಾಗ ಸಮಯಕ್ಕೆ ಸರಿಯಾಗಿ ಆಸ್ಪತ್ರೆಗೆ ತೋರಿಸಿಕೊಳ್ಳಬೇಕು. ಬೆಳವಣಿಗೆಯಲ್ಲಿ ಕುಂಠಿತ ಮಕ್ಕಳು ನಿಮ್ಮಲಿ ಕಂಡು ಬಂದರೆ ಆರ್ಬಿಟ್ ಸಂಸ್ಥೆಗೆ ಕರೆಮಾಡುವಂತೆ ತಿಳಿಸಲಾಯಿತ್ತು.

## "ಸ್ವಾಮಿ ವಿವೇಕಾನಂದ ಜಯಂತಿ ಆಚರಣೆ"



ಜನವರಿ 12 2024 ರಂದು ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಡಾಕುಳಗಿಯಲ್ಲಿ ಸ್ವಾಮಿ ವಿವೇಕಾನಂದ ಜಯಂತಿ ಆಚರಣೆ ಮಾಡಲಾಯಿತು. ಈ ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯ ಗುರುಗಳು, ಶಿಕ್ಷಕರು ಹಾಗೂ ಮಕ್ಕಳು ಭಾಗವಹಿಸಿದರು. ಆರ್ಬಿಟ್ ಸಂಸ್ಥೆಯ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮದ ಸಂಯೋಜಕರಾದ ಮಮತಾ ಮಾತನಾಡುತಾ ಸ್ವಾಮಿ ವಿವೇಕಾನಂದರು ಯುವಕರಿಗೆ "ಏಳಿ ಎದ್ದೇಳಿ ಗುರಿ ಮುಟ್ಟುವ ತನಕ ನಿಲ್ಲದಿರಿ" ಎನ್ನುವ ಮಾತಿನ ಸಂಪೂರ್ಣ ಮಾಹಿತಿಯನ್ನು ನೀಡಿದರು. ಸ್ವಾಮಿ ವಿವೇಕಾನಂದರ ಕೊಡುಗೆ, ಅವರ ಜೀವನ ಚರಿತ್ರೆ ಹಾಗೂ ಅವರ ಆದರ್ಶಗಳ ಕುರಿತು ಮಕ್ಕಳಿಗೆ ವಿವರವಾಗಿ ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಸುಮಾರು 100 ಮಕ್ಕಳು ಮತ್ತು ಸಿಬ್ಬಂದಿ ವರ್ಗದವರು ಭಾಗವಹಿಸಿದರು.



# ಸೇವಾ ಸಂಗಮ ಸಂಸ್ಥೆ, ಕಲಬುರಗಿ

## "ಉಜ್ಜೀವನ ಕಾರ್ಯಕ್ರಮ"

### "ರಾಷ್ಟ್ರಿಯರೈತ ದಿನಾಚರಣೆ ಸೇವಾ ಸಂಗಮ ಅಭಿವೃದ್ದಿ ಸಂಸ್ಥೆ"



ಜನೆವರಿ 11 2024 ರಂದು ಸೇವಾ ಸಂಗಮ ಸಂಸ್ಥೆ ಮತ್ತು ಕಾರಿತಾಸ್ ಇಂಡಿಯಾ ಸಂಸ್ಥೆಯವರ ಸಹಯೋಗದ 'ರಾಷ್ಟ್ರೀಯರೈತ ದಿನಾಚರಣ'ಯನ್ನು 'ಸೇವಾ ಸಂಗಮ' ಸಂಸ್ಥೆಯಲ್ಲಿ ಆಚರಿಸಲಾಯಿತು. ಈ ಕಾರ್ಯಕ್ರಮದ ಅಧ್ಯಕ್ಷ ಸ್ಥಾನ ವಹಿಸಿದ ಕಲ್ಬುರ್ಗಿಯ ಕಥೋಲಿಕ ಧರ್ಮಕ್ಷೇತ್ರದ ಶ್ರೇಷ್ಟ ಗುರುಗಳಾದ ಫಾದರ್ ಸ್ಟ್ಯಾನಿ ಲೋಬೋ ಮಾತನಾಡುತ್ತ, "ಉಜ್ಜೀವನ" ಕಾರ್ಯಕ್ರಮವು ಸುಮಾರು 8 ವರ್ಷಗಳಿಂದ ರೈತರಿಗೋಸ್ಕರ ಕಾರ್ಯ ನಿರ್ವಹಿಸುತ್ತಾ ಬಂದಿದೆ. ಇಂದು ರೈತರು ಒಗ್ಗಟಾಗಿ ತಮ್ಮ ಹಕ್ಕುಗಳ ಬಗ್ಗೆ ಹೋರಾಡಬೇಕು, ಹಳ್ಳಿಗಳಲ್ಲಿರುವ ರೈತರು ಸಿರಿದಾನ್ಯ ಹಾಗೂ ಸಾವಯವ ಕೃಷಿಯ ಮೂಲಕ ಅರ್ಥಿಕತೆಯನ್ನು ಬಲಪಡಿಸಬೇಕು, ರೈತರು ಸ್ವಯಂ ಸೇವಕರಾಗಿ ತಮ್ಮ ಹಳ್ಳಿಗಳ ಬದಲಾವಣೆಗೆ ಶ್ರಮಿಸಬೇಕು, ಇದರಿಂದ ದೇಶದ ಪ್ರಗತಿ ಸಾಧ್ಯ ಎಂದು ತಿಳಿಸಿದರು. ಕೃಷಿ ಇಲಾಖೆಯ ತಾಂತ್ರಿಕ ವ್ಯವಸ್ಥಾಪಕರಾದ ಶ್ರೀಯುತ ಶಿವರಾಯ ಈ ಕಾರ್ಯಕ್ರಮ ಉದ್ದೇಶಿಸಿ ಮಾತನಾಡುತ್ತ, ಕೃಷಿ ಇಲಾಖೆಯಲ್ಲಿ ಸಿಗುವ ಸರಕಾರಿ ಸೌಲಭ್ಯಗಳ ಬಗ್ಗೆ ರೈತರಿಗೆ ಮಾಹಿತಿಯನ್ನು ನೀಡಿದರು. ಸರಕಾರಿ ಸೌಲಭ್ಯಗಳನ್ನು ಪಡೆದುಕೋಳಬೆಕಾದರೆ ಕಡ್ಡಾಯವಾಗಿ ರೈತ ಸಂಪರ್ಕ ಕೆಂದ್ರದಲ್ಲಿ ರೈತರು FID ನೋಂದಣಿ ಮಾಡುವುದರ ಕುರಿತು ಅರಿವು ಮೂಡಿಸಿದರು. 'ಸೆಲ್ಕೋ ಕಂಪನಿಯ' ಕಲ್ಯಾಣ ಕರ್ನಾಟಕದ ವ್ಯವಸ್ಥಾಪಕರಾದ ಶ್ರೀ ಯಲ್ಲಾಲಿಂಗ ಅವರಿಂದ ಸಂಸ್ಥೆಯಲ್ಲಿ ಸಿಗುವ ಸೋಲಾರ ಸಲಕರಣೆಗಳ ಮೇಲೆ ಪಡೆಯಬಹುದಾದ ಸಾಲ ಸೌಲಭ್ಯ, ಸಬ್ಸಿಡಿ ಮುಖಾಂತರ ಸಿಗುವ ರೋಟ್ಟಿ ತಯಾರಿಕೆ ಮಷೀನ್, ಹೋಲಿಗೆ ಯಂತ್ರ, ಹಿಟ್ಟಿನ ಗಿರಣಿ, ಮುಂತಾದವುಗಳನ್ನು ಪಡೆಯುವ ಬಗ್ಗೆ ಪ್ರಾತಿಕ್ಷಿಕೆ ನೀಡಲಾಯಿತು. ಇದೆ ಸಂದರ್ಭದಲ್ಲಿ ಪ್ರಗತಿ ಪರರೈತರಿಗೆ ಮತ್ತು ಸ್ವಯಂ ಸೇವಕರಿಗೆ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಫರತಾಬಾದ, ನಂದಿಕೂರ, ನಂದೂರ ಕೆ, ಗ್ರಾಮದ ಒಟು 45 ಜನ ರೈತರು ಭಾಗವಹಿಸಿ ಮಾಹಿತಿ ಪಡೆದುಕೊಂಡರು. ಕಾರ್ಯಕ್ರಮದಲ್ಲಿ ಸೇವಾ ಸಂಗಮ ಸಂಸ್ಥೆಯ ನಿರ್ದೇಶಕರಾದ ಫಾದರ್ ವಿಕ್ಟರ್ ವಾಸ್ ಸಹ ನಿರ್ದೇಶಕರಾದ ಫಾದರ್ ದೀಪಕ್, ಉಜ್ಜೀವನ ಕಾರ್ಯಕ್ರಮದ ಸಂಯೋಜಕರಾದ ಶ್ರೀ ಚಂದ್ರಕಾಂತ ಮೂಲಿಮನಿ ಉಪಸ್ತಿತರಿದರು, ಶ್ರೀಮತಿ ನಂದಿನಿ ರವರು ಕಾರ್ಯಕ್ರಮ ನಿರೂಪಿಸಿದರು.

### "ಗ್ರಾಮೀಣ ಪ್ರದೇಶದಲ್ಲಿರುವ ಕೃಷಿ ಇಲಾಖೆಯಲ್ಲಿ ರೈತ ಸಂಪರ್ಕ ಸಭೆ"



ಜನವರಿ 24 2024 ರಂದು ಪರತಬಾದ ಗ್ರಾಮಕ್ಕೆ ತೆರಳಿ, ಸೇವಾ ಸಂಗಮ ಸಂಸ್ಥೆಯ ಉಜ್ಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ನವೀನ ಅವರು ಗ್ರಾಮೀಣ ಪ್ರದೇಶದಲ್ಲಿರುವ ಕೃಷಿ ಇಲಾಖೆಯಲ್ಲಿ ರೈತ ಸಂಪರ್ಕ ಸಭೆಯನ್ನು ಆಯೋಜಿಸಿದರು. ಕೃಷಿ ಅಧಿಕಾರಿ ಪ್ರಿಯಂಕಾ ಕುಲಕರ್ಣಿ ಮಾಹಿತಿ ನಿಡುತ್ತ ರೈತರಿಗೆ ದೊರೆಯುವ ಸರಕಾರಿ ಯೋಜನೆಗಳನ್ನು ಹಾಗೂ ಸಮಗ್ರ ಸಾವಯವ ಕೃಷಿ ಪದ್ಧತಿ, ಕ್ಷೇತ್ರ ಬದು ನಿರ್ಮಾಣದಲ್ಲಿ ಹೊಲದ ಬದುಗಳಲ್ಲಿ ಗಿಡ ಮರಗಳನ್ನು ಬೆಳೆಸುವುದು. ಜನರು ವಲಸೆ ಹೋಗದೆ ತಮ್ಮ



ಗ್ರಾಮದಲ್ಲಿಯೆ ಜೇನು ಸಾಕಾಣಿಕೆ, ಮೀನುಗಾರಿಕೆ, ಅಣಬೆ ಬೇಸಾಯ, ಸ್ವ-ಉದ್ಯೋಗವನ್ನು ಮಾಡುವುದರ ಮೂಲಕ ಹೆಚ್ಚಿನ ಆದಾಯವನ್ನು ಪಡೆಯಬಹುದು ಎಂದರು. ಕುಟುಂಬದ ಸುರಕ್ಷಿತ ಜೀವನಕ್ಕೆ ಆದ್ಯತೆ ನೀಡುವುದು ಹಾಗೂ ಕೃಷಿ ಹೊಂಡಕ್ಕೆ ಅರ್ಜಿಗಳು ತುಂಬಾ ಬಂದಿರುವುದರಿಂದ ಚೀಟಿ ಹಾಕುವ ಮುಲಕ ಫಲಾನುಭವಿಯನ್ನು ಆಯ್ಕೆ ಮಾಡಲಾಗುತ್ತದೆ ಎಂದು ತಿಳಿಸಿದರು. ಸಾರ್ವಜನಿಕರು ಹಾಗು ರೈತಬಾಂದವರು ಭಾಗವಹಿಸಿ ಇದರ ಪ್ರೇರಣೆಯನ್ನು ಪಡೆದುಕೊಂಡರು.

## “ರಾಷ್ಟ್ರೀಯ ಮತದಾನದ ಕುರಿತು ಮಾಹಿತಿ”



ಜನೆವರಿ 25 2024 ರಂದು ನಂದೂರ ಕೆ. ಗ್ರಾಮ ಪಂಚಾಯಿತಿಯಲ್ಲಿ ‘ಸೇವಾ ಸಂಗಮ’ ಸಂಸ್ಥೆಯ ಉಜ್ಜೀವನ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ನಂದಿನಿ ಮಾತನಾಡುತ್ತ “ರಾಷ್ಟ್ರೀಯ ಮತದಾರರ ದಿನ”ದ ಅಂಗವಾಗಿ ಮತದಾರರ ಜವಾಬ್ದಾರಿಯನ್ನು ಪ್ರತಿಯೊಬ್ಬರು ಅರಿತು ಕೊಳ್ಳುವಂತೆ ಹಾಗೂ ಪ್ರಜಾ ಪ್ರಭುತ್ವದಲ್ಲಿ ನಿಷ್ಠಾವಂತ ಜನ ನಾಯಕರನ್ನು ಆಯ್ಕೆ ಮಾಡುವದು ಹಾಗೂ ಮತದಾನ ಮಾಡಲು 18 ವರ್ಷಮೇಲ್ಪಟ್ಟ (ಮತದಾರ ಗುರುತಿನ ಚೀಟಿ) ಜನರು ಸಂವಿಧಾನಿಕ ಮತದಾನದ ಹಕ್ಕನ್ನು ಹೊಂದಿರುತ್ತಾರೆ.

## “ಬೇಳೆಗಳ ಬಗ್ಗೆ ಮತ್ತು ತೊಗರಿಬೆಳೆ ನಟೆರೋಗ ಮಾಹಿತಿ”



ಜನವರಿ 19 2024 ರಂದು ಉಜ್ಜೀವನ ಕಾರ್ಯಕ್ರಮದ ಸಿಬ್ಬಂದಿ ವರ್ಗದವರು ಕಲಬುರ್ಗಿ ಜಿಲ್ಲೆಯ ವಿವಿಧ ಇಲಾಖೆಗಳಿಗೆ ಭೇಟಿ ನೀಡುವ ಮೂಲಕ ಸರ್ಕಾರಿ ಯೋಜನೆಗಳ ಬಗ್ಗೆ ಮಾಹಿತಿ ಪಡೆದುಕೊಂಡು, ಕಲ್ಬುರ್ಗಿಯ ಕೃಷಿ ವಿಜ್ಞಾನ ಕೇಂದ್ರದ ಅಧಿಕಾರಿಗಳಾದ ಶ್ರೀಯುತ ಅಜಾರ್ ಅವರು ಕೃಷಿಗೆ ಸಂಬಂಧಿಸಿದ ಬೇಳೆಗಳ ಬಗ್ಗೆ ಮತ್ತು ತೊಗರಿಬೆಳೆಗೆ ಸಂಭದಿಸಿದಂತೆ ನಟೆರೋಗ ಬರದಂತೆ ನೋಡಿಕೊಳ್ಳುವ ಬಗ್ಗೆ ಕೃಷಿ ವಿಜ್ಞಾನ ಕೇಂದ್ರದಲ್ಲಿರುವ ಲ್ಯಾಬೋರೇಟರಿಗೆ ಭೇಟಿ ನೀಡಿ ಮಾಹಿತಿ ಪಡೆಯಲಾಯಿತು.



## “ರೈತರಿಗೆ ಸಾವಯವ ಗೊಬ್ಬರ ಹಾಗೂ ಜೀವಾಮೃತ ತಯಾರು ಮಾಡುವ ಬಗ್ಗೆ ತರಬೇತಿ”

ಜನವರಿ 4 2024 ರಂದು ಕಲಬುರ್ಗಿ ಜಿಲ್ಲೆಯ ನಂದೂರ ಕೆ ಗ್ರಾಮದಲ್ಲಿ ಸೇವಾ ಸಂಗಮ ಸಂಸ್ಥೆಯ ಉಜ್ಜಿವನ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ಇಂದು ರೈತರಿಗೆ ಸಾವಯವ ಗೊಬ್ಬರ ಹಾಗೂ ಜೀವಾಮೃತ ತಯಾರು ಮಾಡಿ ಬೆಳೆಗಳಿಗೆ ಹಾಕುವುದರಿಂದ ಆಗುವ ಲಾಭಗಳು, ಉತ್ತಮ ಗುಣಮಟ್ಟದ ಆಹಾರ, ಧಾನ್ಯ, ಹಣ್ಣುಗಳನ್ನು ಪಡೆಯಬಹುದು. ಸಾವಯವ ಗೊಬ್ಬರ ಕೀಟ ಮತ್ತು ರೋಗಗಳನ್ನು ನಿಯಂತ್ರಿಸುವ ಶಕ್ತಿ ಹೊಂದಿದೆ. ರಾಸಾಯನಿಕ ಗೊಬ್ಬರಗಳ ಬಳಕೆ ಕಡಿಮೆ ಮಾಡುವದರಿಂದ ಮಣ್ಣಿನ ಫಲವತ್ತೆಯನ್ನು ಕಾಪಾಡಬಹುದು ಎಂದು ತಿಳಿಸಿದರು, ಕಾರ್ಯಕ್ರಮದಲ್ಲಿ 14 ಜನ ಮಹಿಳೆಯರು ಭಾಗವಹಿಸಿ ಮಾಹಿತಿ ಪಡೆದುಕೊಂಡರು.



**"ಗ್ರಾಮೀಣ ವಲಯದ ಉನ್ನತೀಕರಣಕ್ಕೆ ಸಮುದಾಯದ ಪ್ರತಿನಿಧಿಗಳೊಂದಿಗೆ ಜೀವನೋಪಾಯ ಆಧಾರಿತ ಅರಿವು ಕಾರ್ಯಕ್ರಮ".**



ಜನವರಿ 5 2024 ರಂದು ಹೊನ್ನಕಿರಣಗಿ ಗ್ರಾಮದಲ್ಲಿ "ಸೇವಾ ಸಂಗಮ" ಸಂಸ್ಥೆಯ ಉಜ್ಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ನವೀನ ಗ್ರಾಮದ ಆಯ್ದ ಸಮುದಾಯದ ಪ್ರತಿನಿಧಿಗಳೊಂದಿಗೆ ಗುಂಪು ಚರ್ಚೆಯನ್ನು ಆಯೋಜಿಸಿ ಗ್ರಾಮದ ಅಗತ್ಯತೆ ಮತ್ತು ಸ್ಥಳೀಯ ಸಂಪನ್ಮೂಲ ಯೋಜನೆಗಳನ್ನು ಸಮುದಾಯದ ಜನರು ಸ್ವ ಗ್ರಾಮದ ಉನ್ನತಿಕರಣಕ್ಕೆ, ಗ್ರಾಮೀಣ ವಲಯದಲ್ಲಿ ಬರುವ ಸರಕಾರಿ ಇಲಾಖೆಗಳನ್ನು ಗುರುತಿಸಿಕೊಂಡು, ಅದರ ಅಡಿಯಲ್ಲಿ ಸಿಗುವ ಸೌಕಭ್ಯಗಳನ್ನು ಪಟ್ಟಿ ಮಾಡುವುದರ ಮೂಲಕ ಪಡೆದುಕೊಳ್ಳುವುದು ಹಾಗೂ ಜನವರಿ ತಿಂಗಳಿನಲ್ಲಿ ಕರ್ನಾಟಕ ಸರ್ಕಾರವು ಕೃಷಿ ಇಲಾಖೆಯಲ್ಲಿ ಸ್ವ ಉದ್ಯೋಗ ಮಾಡಲು ರೈತ ಬಾಂಧವರಿಗೆ ಹಿಟ್ಟಿನ ಗಿರಣಿ, ಖಾರ ಕುಟ್ಟುವ ಯಂತ್ರ, ಶ್ಯಾವಿಗೆ ಯಂತ್ರ, ಹಪ್ಪಳಯಂತ್ರ, ರೊಟ್ಟಿ ಮಾಡುವಯಂತ್ರ, ಬೇಳೆ ಒಡೆಯುವಯಂತ್ರ, ಇವುಗಳಿಗೆ ಅರ್ಜಿ ಸಲ್ಲಿಸುವ ಮೂಲಕ ಸಬ್ಸಿಡಿ ಪಡೆದುಕೊಳ್ಳುವುದು ಹಾಗೂ ಕೌಟುಂಬಿಕ ಜೀವನಮಟ್ಟದ ಸುಧಾರಣೆ ಹಾಗು ಗ್ರಾಮೀಣ ಮಟ್ಟದ ಸಮರ್ಥ ಬೆಳವಣಿಗೆಗೆ ಸಹಕಾರಿ ಎಂದು ತಿಳಿಸಲಾಯಿತು. ಈ ಕಾರ್ಯಕ್ರಮದಲ್ಲಿ 28 ಜನ ರೈತ ಬಾಂಧವರು ಭಾಗವಹಿಸಿ ಕೊಡಲ್ಪಟ್ಟ ಮಾಹಿತಿಯಿಂದ ಪ್ರೇರಣೆಯನ್ನು ಪಡೆದುಕೊಂಡರು.

## "ಸ್ಪರ್ಶ ಕ್ಯಾನ್ಸರ ಕಾರ್ಯಕ್ರಮ"

ಜನವರಿ 4 2024 ರಂದು ಕಲಬುರಗಿ ತಾಲ್ಲೂಕಿನ ನಂದೂರ ಕೆ ಗ್ರಾಮದಲ್ಲಿ ಸ್ವ ಸಹಾಯ ಸಂಘದ ಮಹಿಳೆಯರಿಗೆ ಕ್ಯಾನ್ಸರ್ ಕಾರ್ಯಕ್ರಮದ ಸಂಯೋಜಕಿಯಾದ ಶ್ರೀಮತಿ ಸ್ವಾತಿ ಕ್ಯಾನ್ಸರ್ ಕುರಿತು ಜಾಗೃತಿ ಮೂಡಿಸಿದರು, ಈ ಕಾರ್ಯಕ್ರಮದಲ್ಲಿ ಮಹಿಳೆಯರಿಗೆ ಸ್ತನ ಕ್ಯಾನ್ಸರ್ ಹಾಗೂ ಬಾಯಿ ಕ್ಯಾನ್ಸರ್ ಅರಿವು ಮೂಡಿಸಲಾಯಿತು ಮತ್ತು ಮನೆಯಲ್ಲೆ ಕೈತೋಟ ಮಾಡಿ ಅದರಿಂದ ಬಂದ ತರಕಾರಿ ಸೇವನೆಯಿಂದ ಆಗುವ ಆರೋಗ್ಯದ ಲಾಭಗಳ ಕುರಿತು ಮಾಹಿತಿ ನೀಡಿದರು. ಈ ಕಾರ್ಯಕ್ರಮದಲ್ಲಿ ಒಟ್ಟು 14 ಜನ ಭಾಗವಹಿಸಿ ಕಾರ್ಯಕ್ರಮದ ಸದುಪಯೋಗ ಹಾಗು ಮಾಹಿತಿ ಪಡೆದುಕೊಂಡರು.





ಜನವರಿ 8 2024 ರಂದು ಕಲಬುರ್ಗಿ ತಾಲೂಕಿನ ಸಿತನೂರ್ ಗ್ರಾಮದಲ್ಲಿ ರೈತರಿಗೆ ಹಾಗೂ ಊರಿನ ಜನರಿಗೆ "ಸೇವಾ ಸಂಗಮ" ಸಂಸ್ಥೆಯ ಕ್ಯಾನ್ಸರ್ ಕಾರ್ಯಕ್ರಮದ ಸಂಯೋಜಕಿಯಾದ ಶ್ರೀಮತಿ ಸ್ವಾತಿ 'ಕ್ಯಾನ್ಸರ್' ಜಾಗೃತಿ ಮೂಡಿಸಿದರು ಈ ಕಾರ್ಯಕ್ರಮದಲ್ಲಿ ಕ್ಯಾನ್ಸರ್ ಎಂದರೇನು? ಕ್ಯಾನ್ಸರ್ ನಿಂದ ಆಗುವ ದುಷ್ಪರಿಣಾಮದ ಕುರಿತು ಮಾಹಿತಿ ನೀಡಿದರು, ಕ್ಯಾನ್ಸರ್ ರೋಗ ಬರಲು ಕಾರಣವಾಗುವ ವಿಷಯಗಳ ಬಗ್ಗೆ ತಿಳಿಸಿದರು ಹಾಗೂ ಪ್ಲಾಸ್ಟಿಕ್‌ನ ಅತಿಯಾದ ಬಳಕೆಯ ಮೂಲಕ ಕ್ಯಾನ್ಸರ್ ಸಂಭವಿಸುತ್ತದೆ ಎಂದು ಜಾಗೃತಿ ಮೂಡಿಸಿದ್ದರು. ಹಾಗೂ ಮನೆಯಲ್ಲಿ ಕೈ ತೋಟ ಮಾಡುವುದರಿಂದ ಆಗುವ ಆರೋಗ್ಯದ ಲಾಭಗಳ ಕುರಿತು ಮಾಹಿತಿ ನೀಡಿದರು. ಈ ಕಾರ್ಯಕ್ರಮದಲ್ಲಿ 18 ಜನ ರೈತರು ಮತ್ತು ಊರಿನ ಮುಖಂಡರು, ಜನಸಾಮಾನ್ಯರು ಭಾಗವಹಿಸಿ ಕಾರ್ಯಕ್ರಮದ ಪ್ರಯೋಜನ ಪಡೆದುಕೊಂಡರು. ಇದೇ ಸಂದರ್ಭದಲ್ಲಿ ಬಡ ಕುಟುಂಬದ ರೋಗಿಗಳಿಗಾಗಿ 20 ರೂಪಾಯಿ ದೇಣಿಗೆ ಸಂಗ್ರಹಣೆ ಮಾಡಲಾಯಿತು.



ಜನವರಿ 24 2024 ರಂದು ಕಲಬುರಗಿ ಜಿಲ್ಲೆಯ "ಸೇವಾ ಸಂಗಮ" ಸಂಸ್ಥೆಯಲ್ಲಿ ವಿವಿಧ ನಗರ ಪ್ರದೇಶದ ಆಶಾ ಕಾರ್ಯಕರ್ತರಿಗೆ ಕ್ಯಾನ್ಸರ್ ಕಾರ್ಯಕ್ರಮದ ಸಂಯೋಜಕಿಯಾದ ಶ್ರೀಮತಿ ಸ್ವಾತಿ ಅವರು ಕ್ಯಾನ್ಸರ ಕುರಿತು ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಿ, ಕಾರ್ಯಕ್ರಮದಲ್ಲಿ ಕ್ಯಾನ್ಸರ ಲಕ್ಷಣಗಳು, ಪರಿಣಾಮ ಹಾಗೂ ಕ್ಯಾನ್ಸರ್ ತಪಾಸಣೆ ಮಾಡಿಸಿಕೊಳ್ಳುವುದರಿಂದ ಆಗುವ ಲಾಭಗಳ ಕುರಿತು ಮಾಹಿತಿ ನೀಡಿದರು ಹಾಗೂ ಪ್ಲಾಸ್ಟಿಕ್ ಅತಿಯಾದ ಬಳಕೆಯಿಂದಲು ಕ್ಯಾನ್ಸರ್ ಸಂಭವಿಸುತ್ತದೆ ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಒಟ್ಟು 52 ಜನ ಆಶಾ ಕಾರ್ಯಕರ್ತರು ಭಾಗವಹಿಸಿ ಮಾಹಿತಿ ಪಡೆದುಕೊಂಡರು.




ಜನವರಿ 25 ರಂದು ಕಲಬುರಗಿ ಜಿಲ್ಲೆಯ ಸೆಂಟ್ ಮೇರಿ ಶಾಲೆ ಕೊಟ್ನೂರ್ (ಡಿ) ಶಾಲೆಯ ಮಕ್ಕಳಿಗೆ ಹಾಗೂ ಸಿಬ್ಬಂದಿ ವರ್ಗದವರಿಗೆ "ಸೇವಾ ಸಂಗಮ" ಸಂಸ್ಥೆಯ ನಿರ್ದೇಶಕರಾದ ಫಾದರ್ ವಿಕ್ಟರ್ ವಾಸ್ ರವರು, ಕ್ಯಾನ್ಸರ್ ಬಗ್ಗೆ ಜಾಗೃತಿ ಮೂಡಿಸಿದರು. ಸಮಾಜದಲ್ಲಿ ಕ್ಯಾನ್ಸರ್ ಹೆಚ್ಚಾಗಿ ಹರಡುತ್ತಿದೆ ಇದಕ್ಕೆ ಕಾರಣ ಜಂಕ ಫುಡ್ ಸೇವನೆ, ಅತಿಯಾದ ರಾಸಾಯನಿಕ ಬಳಕೆ, ಬೀಡಿ, ಸಿಗರೇಟು, ಶರಾಬು ಸೇವನೆ, ಇದರಿಂದಾಗಿ ವಿವಿಧ ರೀತಿಯ ಕ್ಯಾನ್ಸರನ ಲಕ್ಷಣಗಳು ಕಂಡು ಬರುತ್ತವೆ. ಆದ ಕಾರಣ ಅದನ್ನು ನಾವು ಮುಂಚಿತವಾಗಿ ಅಥವಾ ಪ್ರಾರಂಭದಲ್ಲೆಯೆ ಗುರುತಿಸಿದರೆ ಸೂಕ್ತವಾದ ಚಿಕಿತ್ಸೆಯನ್ನು ನೀಡಬಹುದು ಎಂದು ತಿಳಿಸಿದರು. ಹಾಗೂ ವಿಶ್ವ ಕ್ಯಾನ್ಸರ ದಿನದ ಅಂಗವಾಗಿ ಬಡ ಕುಟುಂಬದ ಕ್ಯಾನ್ಸರ್ ರೋಗಿಗಳಿಗೆ 10 ರೂಪಾಯಿ ಸಹಾಯ ಧನ ಸಂಗ್ರಹಿಸುವ ಮೂಲಕ ರೋಗದಲ್ಲಿರುವ ಪ್ರತಿಯೊಬ್ಬರ ಜೀವನ ಕಾಪಾಡುವುದು ನಮ್ಮೆಲರ ಕರ್ತವ್ಯವಾಗಿದೆ ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಒಟ್ಟು 1300 ಮಕ್ಕಳು ಹಾಗೂ ಶಿಕ್ಷಕರು ಭಾಗವಸಿ ಇದರ ಪ್ರೇರಣೆಯನ್ನು ಹಾಗು ಸದುಪಯೋಗ ಪಡೆದುಕೊಂಡರು.

## "ಕಲಿಕಾ ಕೇಂದ್ರದ ಮಕ್ಕಳಿಗೆ ಒಂದು ದಿನದ ಕಲಿಕಾ ಪ್ರವಾಸ"



ಜನವರಿ 21 2024 ರಂದು ಸೇವಾ ಸಂಗಮ ಸಂಸ್ಥೆಯ ವತಿಯಿಂದ ಕಲಬುರಗಿ ನಗರದ 5 ಹಿಂದುಳಿದ ಪ್ರದೇಶಗಳಾದ ಸಂಜು ನಗರ, ನೇಹರು ನಗರ, ಪಂಚಶೀಲಾ ನಗರ, ಇಂದಿರಾ ನಗರ ಹಾಗೂ ಬೋರಾಬಾಯಿ ನಗರದ ಕಲಿಕಾ ಕೇಂದ್ರದ ಮಕ್ಕಳಿಗೆ ಒಂದು ದಿನದ ಕಲಿಕಾ ಪ್ರವಾಸಕ್ಕೆಂದು ಬಸವಕಲ್ಯಾಣಕ್ಕೆ ಹೋಗಲಾಯಿತ್ತು. ಮಕ್ಕಳನ್ನು ಬಸವಕಲ್ಯಾಣದ ಪ್ರಮುಕ ಸ್ಥಳಗಳಾದ ಅನುಭವ ಮಂಟಪ, ರಾಜರು ಆಳಿದಂತಹ ಕಿಲಾ, 108 ಅಡಿ ಎತ್ತರದ ಬಸವಣ್ಣನವರ ಮೂರ್ತಿ ಹಾಗೂ ಗಾರ್ಡನ್‌ಗೆ ಕರೆದುಕೊಂಡು ಹೋಗಲಾಯಿತ್ತು. ಈ ಪ್ರವಾಸದಲ್ಲಿ ಸೇವಾ ಸಂಗಮ ಸಂಸ್ಥೆಯ ಸಹ ನಿರ್ದೇಶಕರಾದ ಫಾದರ್ ದೀಪಕ ಹಾಗೂ ಸಾವಿತ್ರ ಬಾ ಫುಲೆ ಮಹಿಳಾ ಸಂಘಟನೆಯ ಸಂಚಾಲಕೀಯಾದ ಶ್ರೀಮತಿ ರೇಣುಕಾ ಎಸ್, ಸರಡಗಿ ಮುಂದಾಳತ್ವ ವಹಿಸಿದರು. ಮಕ್ಕಳಿಗೆ ಬಸವಣ್ಣನವರ ಜೀವನ ಚರಿತ್ರೆಯನ್ನು ಹಾಗೂ ಅವರು ಮಾಡಿದಂತಹ ಕಾಯಕಗಳನ್ನು, ಅಲ್ಲಿರುವಂತಹ ಭಾವಚಿತ್ರಗಳನ್ನು ವಿವರಿಸುವ ಮುಖಾಂತರ ತಿಳಿಸಿದರು. ಈ ಪ್ರವಾಸದಲ್ಲಿ 76 ಮಕ್ಕಳು, ಕಲಿಕಾ ಕೇಂದ್ರದ ಶಿಕ್ಷಕಿಯರು, ಸೇವಾ ಸಂಗಮ ಸಂಸ್ಥೆಯ ನಿರ್ದೇಶಕರಾದ ಫಾದರ್ ವಿಕ್ಟರ್ ವಾಸ್, ಸಹ ನಿರ್ದೇಶಕರಾದ ಫಾದರ್ ದೀಪಕ, ಹಾಗೂ ಕಚೇರಿಯ ಸಹಾಯಕಿಯಾದ ಶ್ರೀಮತಿ ಸ್ವಾತಿ ರವರು ಪಾಲ್ಗೋಂಡಿದರು. ಈ ಪ್ರವಾಸದ ಮುಖಾಂತರ ಮಕ್ಕಳು ಬಸವಣ್ಣನವರ ಜೀವನ ಚರಿತ್ರೆಯನ್ನು ಬಹು ಹತ್ತಿರದಿಂದ ತಿಳಿದುಕೋಂಡರು ಹಾಗೂ ಅವರ ಆದರ್ಶಗಳ ಮುಖಾಂತರ ಸ್ಪೂರ್ತಿಯನ್ನು ಪಡೆದುಕೊಂಡರು. ಈ ಒಂದು ಕಲಿಕಾ ಪ್ರವಾಸವು ಮಕ್ಕಳಗೆ ತುಂಬಾ ಸಂತೋಷದಾಯಕ ದಿನವಾಗಿತ್ತು.



## “ಮನುಷ್ಯನ ಅಭಿವೃದ್ಧಿ ಮನು ಕುಲದ ಅಂತಿಮ ಗುರಿಯಾಗಬೇಕು”



ಜನೆವರಿ 08 2024 ಕಲಬುರಗಿ ತಾಲ್ಲೂಕಿನಲ್ಲಿ ಬರುವ ಜೋಗರು ಗ್ರಾಮದ ಸರಕಾರಿ ಪ್ರೌಢ ಶಾಲೆಯಲ್ಲಿ ಸೇವಾ ಸಂಗಮ ಸಂಸ್ಥೆ ವತಿಯಿಂದ ಕ್ಯಾನ್ಸರ್ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಶ್ರೀ ರಾಜಕುಮಾರ ದೇವರಮನಿ, ಮನುಷ್ಯನ ಅಭಿವೃದ್ಧಿ ಮನು ಕುಲದ ಅಂತಿಮ ಗುರಿಯಾಗಬೇಕು ಅಂದರೆ ಮನುಷ್ಯನಿಗೆ ಸಾವಿನ ಕಡೆಗೆ ಕರೆದೊಯುತ್ತಿರುವ ಈ ಕ್ಯಾನ್ಸರ ರೋಗದ ಕುರಿತು ಪ್ರತಿಯೊಬ್ಬರು ಅರಿಯಲೇ ಬೇಕಾಗಿದೆ. ಆದ್ದರಿಂದ ಸೇವಾ ಸಂಗಮ ಸಂಸ್ಥೆ ಪುಟಾಣಿ ಮಕ್ಕಳಿಂದ ಹಿಡಿದು ವಯೋವೃದ್ದರವರೆಗೂ ಈ ರೋಗದ ಕುರಿತು ಅರಿವು ಮೂಡಿಸುವ ಕಾರ್ಯ ಮಾಡುತ್ತಿದೆ ಈ ಮೂಲಕ ಮಾನವ ಅಭಿವೃದ್ಧಿಯ ಕಾರ್ಯವನ್ನು ಮಾಡುತ್ತಿದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಶ್ರಿ ವೆಂಕಟೇಶ ಕುಕಲಕರ್ಣಿ ಮುಖ್ಯಗುರುಗಳು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ “ಕೈಲಾಸ ದೊಡ್ಡದಲ್ಲ, ಕಾಯಕ ದೊಡ್ಡದು, ಧರ್ಮ ದೋಡ್ಡದಲ್ಲ, ದಯೆ ದೊಡ್ಡದು, ಅರಿವು ದೊಡ್ಡದಲ್ಲ, ಆಚಾರ ದೋಡ್ಡದು, ಅಧಿಕಾರ ದೋಡ್ಡದಲ್ಲ, ಅಭಿಮಾನ ದೋಡ್ಡದು, ಆಸ್ತೀ ದೋಡ್ಡದಲ್ಲ, ಆರೊಗ್ಯ ದೋಡ್ಡದು” ಎಂಬುದನ್ನು ಸೇವಾ ಸಂಗಮ ಸಂಸ್ಥೆ ಈ ಕಾರ್ಯಕ್ರಮದ ಮೂಲಕ ಜನರಿಗೆ ಹೇಳಲು ಬಯಸುತ್ತಿದೆ ಎಂದು ಹೇಳಿದರು. ಕಾರ್ಯಕ್ರಮದ ವೇದಿಕೆಯಲ್ಲಿ ಶಾಲಾ ಶಿಕ್ಷಕರು ಉಪಸ್ಥಿತರಿದ್ದು, ಒಟ್ಟು 80 ಜನ ಮಕ್ಕಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾಹಿತಿ ಪಡೆದುಕೊಂಡರು.

## ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ

### “ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳ ಪಾಲಕರಿಗೆ ಟಿ.ಎಲ್.ಎಮ್. ಟ್ರೈನಿಂಗ್”



2 ಜನೇವರಿ 2024 ರಂದು ಚೇತನ ಶಿಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮದ ಅಡಿಯಲ್ಲಿ 0–6 ವರ್ಷದೊಳಗಿನ ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳ ಪಾಲಕರಿಗೆ ಟಿ.ಎಲ್.ಎಮ್. ತರಬೇತಿ ಮಾಡಲಾಯಿತು. ಮಕ್ಕಳಿಗೆ ಪಾಲಕರು ಮನೆಯಲ್ಲಿರುವ ವಸ್ತುಗಳನ್ನು ಉಪಯೋಗಿಸಿಕೊಂಡು ಯಾವ ರೀತಿಯಾಗಿ ಮಕ್ಕಳಿಗೆ ಚಟುವಟಿಕೆ ಮಾಡಬೇಕೆಂದು ಶಿವಕಾಂತ ಅವರು ತಿಳಿಸಿದ್ದರು. ಮತ್ತು ಎಲ್ಲಾ ಪಾಲಕರು ತುಂಬಾ ಆಸಕ್ತಿಯಿಂದ ಕಲಿತರು ಮಕ್ಕಳ ಕೈಯಿಂದ ವಿವಿದ ರೀತಿಯಾದ ಪೇಪರ ಕಟಿಂಗ್ ಮಾಡಿ ಒಂದು ಆಕಾರವನ್ನು ತಯಾರಿಸಿದರು, ಈ ಒಂದು ಕಾರ್ಯಕ್ರಮದಲ್ಲಿ ಸೆಂಟ್ ಮೇರಿ ಶಾಲೆಯ ಮುಖ್ಯ ಗುರುಗಳಾದ ಫಾದರ ಪ್ರವೀಣ ಹಾಗು EI &EE ಕಾರ್ಯಕ್ರಮದ ಸಂಯೋಜಕಿಯಾದ ಶ್ವೇತಾ, ಕಾರ್ಯಕರ್ತರಾದ ಅನೀತಾ, ಜಗದೇವಿ, ಲಕ್ಷಣ, ಹಾಗೂ ಶೀವಕಾಂತ ಭಾಗವಹಿಸಿದ್ದರು.

### “ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಕುರಿತು ಅರಿವು ಕಾರ್ಯಕ್ರಮ”



ಸೇವಾ ಸಂಗಮ ಸಂಸ್ಥೆ ಮತ್ತು ಅಜೀಂ ಪ್ರೇಮಜಿ ಫೌಂಡೇಶನ ಸಂಯುಕ್ತಾಶ್ರಯದಲ್ಲಿ ಕಲಬುರಗಿ ನಗರದ ಹಾಜ ಕಮಿಟಿ ಅಂಗನವಾಡಿ ಕೇಂದ್ರ 3 ರಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಕುರಿತು ಅರಿವು ಕಾರ್ಯಕ್ರಮ ಹಮ್ಮಿಕೋಳ್ಳಲಾಯಿತ್ತು. ಅಂಗನವಾಡಿ ಕಾರ್ಯಕರ್ತೆಯಾದ ಸಾಹೆರಾ ಬಾನು ಅವರು ಪಾಲ್ಗೂಂಡಿದ್ದರು. 13 ಜನ ಪಾಲಕರು ಉಪಸ್ಥಿತರಿದ್ದರು. ಬೆಳವಣಿಗೆಯಲ್ಲಿ ಕುಂಠಿತ ವಿರುವಂತಹ ಮಕ್ಕಳನ್ನು ಗುರುತಿಸಿ ಅವರ ನ್ಯೂನತೆಯನ್ನು ಹೋಗಲಾಡಿಸಿ ಅವರಿಗೆ ಹಲವಾರು ರೀತಿಯ ಚಟುವಟಿಕೆಯನ್ನು ಮಾಡಿಸಲಾಗುವುದು, ಜೋತೆಗೆ ಸರ್ಕಾರದಿಂದ ಸಿಗುವಂತಹ ಸೌಲಭ್ಯಗಳು ಅಂದರೆ UDID ಕಾರ್ಡ ಮತ್ತು ನಿರಾಮಯ ಕಾರ್ಡಗಳನ್ನು ದೋರಕಿಸುವಲ್ಲಿ ಸೇವಾ ಸಂಗಮ ಸಂಸ್ಥೆ ಕಾರ್ಯ ನಿರ್ವಹಿಸುತ್ತಿದೆ ಎಂದು ತಿಳಿಸಲಾಯಿತ್ತು.

## "ಬೆಳವಣಿಗೆಯಲ್ಲಿ ಕುಂಠಿತ ವಿರುವಂತಹ ಮಕ್ಕಳಿಗೆ ಚಟುವಟಿಕೆ"



ಜನೆವರಿ 12 2024 ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮಜೀ ಫೌಂಡೇಶನ ಸಂಯುಕ್ತಾಶ್ರಯದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದಡಿಯಲ್ಲಿ ಗುಲ್ಬರ್ಗಾ ನಗರದಲ್ಲಿರುವಂತಹ ಗುಬ್ಬಿ ಕಾಲೂನಿಯಲ್ಲಿ ವಾಸಿಸುವಂತಹ ಮಗುವಿನ ಮನೆಗೆ ಭೇಟಿ ನೀಡಿ, ಆ ಮಗುವಿಗೆ ಕುಳಿತು ಕೋಳ್ಳುವಂತೆ ಅಂದರೆ ಖೌಂದಿ ಸುತ್ತಿ ಮಗುವಿಗೆ ಅದರ ಸಹಾಯದಿಂದ ಕುಳಿತು ಕೊಳ್ಳುವಂತ ಚಟುವಟಿಕೆಯನ್ನು ಮಾಡಿಸಲಾಯಿತು. ಜೊತೆಗೆ ಈ ಮಗುವಿಗೆ ನ್ಯೂಟ್ರಿಷನ್ ಫುಡ ಕೊಡುತಿದ್ದವೆ ಆ ನ್ಯೂಟ್ರಿಷನಿಂದ ಫುಡನಿಂದ ಮಗುವಿನಲ್ಲಿ ತುಂಬಾ ಧನಾತ್ಮಕ ಬದಲಾವಣೆ ಕಂಡುಬರುತ್ತಿದೆ ಎಂದು ಹೇಳಬಹುದು.

## ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕುರಿತು ಮಾಹಿತಿ ಕಾರ್ಯಕ್ರಮ

ಜನೆವರಿ 03 2024 ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಅಜಿಮ್ ಪ್ರೇಮಜಿ ಫೌಂಡೇಶನ ವತಿಯಿಂದ ಉದನೂರ ಗ್ರಾಮದ ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳ ಮಾಹಿತಿ ಸಂಗ್ರಹ ಕಾರ್ಯಕ್ರಮವನ್ನು ಹಮ್ಮೀಕೋಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಮಕ್ಕಳು ಹಾಗೂ ಪಾಲಕರು ಉಪಸ್ಥಿತರಿದ್ದರು, 0–6 ವರ್ಷದೊಳಗಿನ ಮಕ್ಕಳ ಬೆಳವಣಿಗೆ ಕುಂಠಿತವಿರುವ ಮಕ್ಕಳನ್ನು ಗುರುತಿಸಿ ಈ ಮಕ್ಕಳನ್ನು ತಪಸಣೆ ಮಾಡಿ ಆ ಮಕ್ಕಳಿಗೆ ಚಟುವಟಿಕೆ ನೀಡುವುದು ಆ ಮಕ್ಕಳಿಗೆ ಅವಶ್ಯಕತೆ ಇರುವ ಸಾಧನಾ ಸಲಕರಣೆ ನೀಡಿ ಮಗುವಿನಲ್ಲಿರುವ ನ್ಯೂನ್ಯತೆ ಸ್ವಲ್ಪ ಮಟ್ಟಿಗೆ ಆದರೂ ಕಡಿಮೆ ಮಡಬಹುದು.





ಜನೆವರಿ 05 2024 ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಅಜಿಮ್ ಪ್ರೇಮಜಿ ಫೌಂಡೇಶನ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಕ್ಕಳ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮದ ಅಡಿಯಲ್ಲಿ ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಗುವಿಗೆ ಸೊಂಟದಲ್ಲಿ ಶಕ್ತಿ ಇರದ ಕಾರಣ ಕುಡಿಸೋದು ಹಾಗು ಆಧಾರ ಸಹಿತ ಚಟುವಟಿಕೆಯನ್ನು ಕಾರ್ಯಕರ್ತೆಯಾದ ಕುಮಾರಿ ಅನಿತಾ ಮಾಡಿಸಿದರು.



ಜನವರಿ 3 2024 ರಂದು ಶಿಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಅರಿವು ಕಾರ್ಯಕ್ರಮವನ್ನು ಶ್ರೀ ಕರಿಬಸವೇಶ್ವರ ಪ್ರೌಢ ಶಾಲೆಯಲ್ಲಿ ಹಮ್ಮಿಕೋಳಲಾಯಿತ್ತು. ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಮ ಪ್ರೇಮಜಿ ಫೌಂಢೇಶನ ಜೋತೆಯಾಗಿ ಬೇಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳೋಂದಿಗೆ ನಾವು ಕೆಲಸ ಮಾಡುತ್ತಿದ್ದೇವೆ, ಮಕ್ಕಳಲ್ಲಿ ನ್ಯೂನತೆ ಅಂದರೆ ನಡೆಯಲು ಮತ್ತು ಕುಳಿತುಕೊಳ್ಳಲು ಬಾರದ ಮಕ್ಕಳು, ಕತ್ತು ನಿಲ್ಲುವುದಿಲ್ಲಾ, ಮಾತು ಬರುವುದಿಲ್ಲಾ, ಕಿವಿ ಕೇಳಿಸಿವುದಿಲ್ಲಾ ಅಂತಹ ಮಕ್ಕಳು ನಿಮ್ಮ ಅಕ್ಕ-ಪಕ್ಕದಲ್ಲಿ ಅಥವಾ ನಿಮ್ಮ ಮನೆಯ ಹತಿರ ಇದ್ದರೆ ನಮ್ಮಗೆ ತಿಳಿಸಿ ಎಂದು 8 ರಿಂದ 10ನೇ ತರಗತಿಯ ವಿಧ್ಯಾರ್ಥಿಗಳಿಗೆ ಮಾಹಿತಿ ನೀಡುವ ಮುಲಕ ಕೋರಲಾಯಿತು. ಈ ಕಾರ್ಯಕ್ರಮದಲ್ಲಿ 30 ವಿಧ್ಯಾರ್ಥಿಗಳು ಹಾಗೂ ಶಾಲಾ ಶಿಕ್ಷಕರು ಭಾಗವಹಿಸಿದರು.

## "ನಮ್ಮ ಜೀವನ ಸಾರ್ಥಕವಾಗಿರುವುದು ನಾವು ಸಂತೋಷದಿಂದ ಇದ್ದೇವೆ ಎಂಬುವುದರಿಂದಲ್ಲಾ, ನಮ್ಮಿಂದ ಎಷ್ಟು ಜನ ನೆಮ್ಮದಿ ಹಾಗೂ ಸಂತೋಷದಿಂದ ಇದ್ದಾರೆ ಎಂಬುವುದರಿಂದ "



ಕಲಬುರಿಗ ತಾಲ್ಲೂಕಿನ ಫರಹತಬಾದ ಗ್ರಾಮದ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಜನೇವರಿ 2 2024 ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮ್‌ಜಿ ಫೌಂಢೇಶನ ಸಂಯುಕ್ತ ಆಶ್ರಯದಲ್ಲಿ "ಶಿಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ" ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೋಳ್ಳಲಾಯಿತು. ಕಾರ್ಯಕ್ರಮದ ಘನ ಅಧ್ಯಕ್ಷತೆಯನ್ನು ಶ್ರೀಮತಿ ಪ್ರೇಮಲತಾ ಪ್ರಭಾರಿ ಮುಖ್ಯಗುರುಗಳು ವಹಿಸಿಕೊಂಡಿದಿರು, ಕಾರ್ಯಕ್ರಮದ ವೇದಿಕಯಲ್ಲಿ ಸಹ ಶಿಕ್ಷಕರು ಉಪಸ್ಥಿತರಿದ್ದರು. ಕಾರ್ಯಕ್ರಮವನು ಉದ್ದೇಶಿಸಿ ಮಾತನಾಡಿದ ಶ್ರೀ ರಾಜಕುಮಾರ ದೇವರಮನಿ ಸೇವಾ ಸಂಗಮ ಸಂಸ್ಥೆ ಕಲಬುರಗಿ ಜಿಲ್ಲೆಯಲ್ಲಿ ಸುಮಾರು 18 ವರ್ಷಗಳಿಂದ ಜನರ ಅಭಿವೃದ್ಧಿಗಾಗಿ ಕಾರ್ಯವನ್ನು ನಿರ್ವಹಿಸುತ್ತಿದೆ. ಅದರಲ್ಲಿ ವಿಶೇಷವಾಗಿ ಮಕ್ಕಳೊಂದಿಗೆ ಬೇಳವಣಿಗೆಯಲ್ಲಿ ಕುಂಠಿತ ಹೋಂದಿರುವ ಮಕ್ಕಳ ಅಭಿವೃದ್ಧಿಗಾಗಿ ಕಾರ್ಯವನ್ನು ನಿರ್ವಹಿಸುತ್ತಿದೆ. ಇಂತಹ ಮಕ್ಕಳನ್ನು ಗುರುತಿಸುವ ಮೂಲಕ ಅವರ ಪಾಲಕರ ಮನವೋಲಿಸಿ ಆ ಮಕ್ಕಳ ವಿಶ್ಲೇಷಣೆಯನ್ನು ಮಾಡುವ ಮೂಲಕ ಮಗುವಿನ ಬೇಳವಣಿಗೆ ಕುಂಠಿತಕ್ಕೆ ತಕ್ಕ ಉತ್ತೇಜಕ ಚಟುವಟಿಕೆಯನ್ನು ನೀಡುವ ಮೂಲಕ ಬೆಳವಣಿಗೆ ಕುಂಠಿತ ಮುಕ್ತ ಕುಟುಂಬವನ್ನು ಮಾಡುವ ಕಾರ್ಯವನ್ನು ಮಾಡಲಾಗುತ್ತಿದೆ ಹಾಗೂ ಸರಕಾರದಿಂದ ಸಿಗುವ ಸೌಲಭ್ಯಗಳ ಕುರಿತು ಮಾಹಿತಿಯನ್ನು ನೀಡಿ ಆ ಕುಟುಂಬಗಳು ಆರ್ಥಿಕವಾಗಿ ಸಬಲ ಆಗುವಂತೆ ಸಹಾಯವನ್ನು ಮಾಡಲಾಗುತ್ತಿದೆ. ಈ ಸಮಾಜಕ್ಕೆ ಬರುವ ಪ್ರತಿಯೊಂದು ಮಗು ತನಗಿರುವ ದೇಹದ ನ್ಯೂನತೆಯಿಂದ ಹಿಂಜರಿಯದೇ ಕೀಳರಿಮೆಗೆ ಒಳಗಾಗದೇ ಎಲ್ಲರೊಂದಿಗೆ ಸಮಾನತೆಯಿಂದ, ಘನತೆಯಿಂದ ಗೌರವಯುತವಾದ ಬದುಕನ್ನು ಕಟ್ಟಿಕೊಳ್ಳುವಂತೆ ಮಾಡಲಾಗುತ್ತಿದೆ "ನಮ್ಮ ಜೀವನ ಸಾರ್ಥಕವಾಗಿರುವುದು ನಾವು ಸಂತೋಷದಿಂದ ಇದ್ದೇವೆ ಎಂಬುವುದರಿಂದಲ್ಲಾ, ನಮ್ಮಿಂದ ಎಷ್ಟು ಜನ ನೆಮ್ಮದಿ ಹಾಗೂ ಸಂತೋಷದಿಂದ ಇದ್ದಾರೆ ಎಂಬುವುದರಿಂದ" ಆದ್ದರಿಂದ ಮಕ್ಕಳೇ ತಮ್ಮ ಮನೆಯಲ್ಲಿ ಅಥವಾ ತಮ್ಮ ಅಕ್ಕ – ಪಕ್ಕದ ಮನೆಗಳಲ್ಲಿ ಬೇಳವಣಿಗೆಯಲ್ಲಿ ಕುಂಠಿತ ಮಕ್ಕಳು ಕಂಡು ಬಂದಲ್ಲಿ ನಮಗೆ ತಿಳಿಸುವುದು ಅಥವಾ ಆ ಮಕ್ಕಳ ಪಾಲಕರಿಗೆ ಸೇವಾ ಸಂಗಮ ಸಂಸ್ಥೆಯ ಕಾರ್ಯದ ಬಗ್ಗೆ ತಿಳಿಸಬೇಕು ಎಂದು ಹೇಳಿದರು. ಈ ಕಾರ್ಯಕ್ರಮದಲ್ಲಿ ಒಟ್ಟು 100 ಜನ ಮಕ್ಕಳು ಭಾಗವಹಿಸಿ ಮಾಹಿತಿ ಪಡೆದುಕೊಂಡರು.

## "ವಿಶ್ವ ವಿಕಲಚೇತನರ ದಿನಾಚರಣೆ"



ಜನವರಿ 5 2024 ರಂದು ಕಲಬುರಗಿ ಜಿಲ್ಲೆಯ ಹೊನ್ನಕಿರಣಗಿ ಗ್ರಾಮದಲ್ಲಿ ಸೇವಾ ಸಂಗಮ ಸಂಸ್ಥೆಯು ಶ್ರೀ ವೀರಭದ್ರೇಶ್ವರ ದೇವಸ್ಥಾನದ ಆವರಣದಲ್ಲಿ "ವಿಶ್ವ ವಿಕಲ ಚೇತನರ ದಿನಾಚರಣೆಯನ್ನು ಆಚರಿಸಲಾಯಿತು. ಸಂಸ್ಥೇಯ ಸಹ–ನಿರ್ದೇಶಕಾದ "ಫಾದರ್ ದೀಪಕ್" ಅವರು ಈ ಕಾರ್ಯಕ್ರಮವನ್ನು ಉದ್ಘಾಟಿಸಿ ವಿಕಲಚೇತನರ ಕುರಿತು ಪ್ರಾಸ್ತವಿಕ ಮಾತನಾಡುತ್ತ "ಸರ್ವರಿಗೂ ಸಮಬಾಳು ಸರ್ವರಿಗೂ ಸಮಪಾಲು ಇದೆ, ಈ ಸಮಾಜದಲ್ಲಿ ನಿಮ್ಮಗೂ ಸಹ ಎಲ್ಲಾರಂತೆ ಬದುಕುವ ಹಕ್ಕು ಇದೆ, ನೀವುಗಳು ಉತ್ತಮವಾದ ಶಿಕ್ಷಣ ಪಡೆದು ಈ ಸಮಾಜಕ್ಕೆ ನಿಮ್ಮದೇ ಆದ ಕೊಡುಗೆ ನೀಡಿ ಎಂದು ಹೇಳಿದ್ದರು. ಅದೇ ರೀತಿಯಾಗಿ ವಿಕಲ ಚೇತನರಾದ ಗ್ರಾಮ ಪಂಚಾಯಿತಿ ಸದಸ್ಯರಾದ ಮಲ್ಲಿಕಾರ್ಜುನ ಅವರು ತಮ್ಮ ಅನಿಸಿಕೆಗಳು ವ್ಯಕ್ತಪಡಿಸಿದ್ದರು. ಈ ಸೇವಾ ಸಂಗಮ ಸಂಸ್ಥೆಯುವು ಸತತವಾಗಿ 18 ವರ್ಷದಿಂದ ಬಡವರಿಗೆ ಮತ್ತು ವಿಕಲಚೇತರಿಗೆ ಗುರುತಿಸಿ ಅವರ ಬಾಳಿನಲ್ಲಿ ಈ ಸಂಸ್ಥೆ ದಾರಿ ದೀಪವಾಗಿದೆ ಎಂದು ನುಡಿದರು. ಈ ಕಾರ್ಯಕ್ರಮದಲ್ಲಿ 40 ವಿಶೇಷ ವಿಕಲ ಚೇತನರು, ಊರಿನ ಗಣ್ಯವ್ಯಕ್ತಿಗಳು, ಮಕ್ಕಳ ಪಾಲಕರು ಹಾಗೂ EI & EE ಎಲ್ಲಾ ಸಿಬ್ಬಂದಿ ವರ್ಗದವರು ಭಾಗಿಯಾಗಿದ್ದರು.

## “ಶ್ರವಣ ಸಾಧನ ಸಲಕರಣೆಗಳ ವಿತರಣೆ ಕಾರ್ಯಕ್ರಮ”



ಕಲಬುರಗಿ ನಗರದ ಸೇವಾಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮ್‌ಜಿ ಫೌಂಢೇಶನ ಸಂಯುಕ್ತ ಆಶ್ರಯದಲ್ಲಿ ಜನೇವರಿ 24 2024 ರಂದು **“ಶ್ರವಣ ಸಾಧನಾ ಸಲಕರಣೆಗಳ ವಿತರಣೆ ಕಾರ್ಯಕ್ರಮವನ್ನು”** ಸೇವಾ ಸಂಗಮ ಸಂಸ್ಥೆಯಲ್ಲಿ ಹಮ್ಮಿಕೊಳ್ಳಲಾಯಿತು. ಶ್ರವಣ ನ್ಯೂನತೆಯುಳ್ಳ ಮಕ್ಕಳಿಗೆ ಶ್ರವಣ ಸಾಧನಗಳನ್ನು ವಿತರಿಸಿ ಮಾತನಾಡಿದ ಪರಮ ಪೂಜ್ಯ ಬಿಷಪ್ ರಾಬರ್ಟ ಮೈಕಲ್ ಮಿರಾಂದ ಧರ್ಮಾಧ್ಯಕ್ಷರು, ಕಲಬರುಗಿ ಧರ್ಮ ಕ್ಷೇತ್ರ ಹಾಗೂ ಸೇವಾ ಸಂಗಮ ಸಂಸ್ಥೆಯ ಅಧ್ಯಕ್ಷರು ಮಾತನಾಡುತ್ತ ಸಮಾಜದಲ್ಲಿರುವ ಜನರು ಅನೇಕ ರೀತಿಯ ವಿಕಲಾಂಗತೆಗೆ ಒಳಗಾದವರು ಇದ್ದಾರೆ, ಇದನ್ನು ನಾವು ಮಕ್ಕಳಲ್ಲಿ ನೋಡಿದ್ದಾಗ ಅವರ ಭವಿಷ್ಯ ಕಲ್ಪಿಸಿಕೊಳ್ಳುವುದಕ್ಕೂ ನಿಜಕ್ಕೂ ಕಷ್ಟವಾಗುತ್ತದೆ ಏಕೆಂದರೆ ಅವರ ಪಾಲಕರು ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಹಿಂದೂಳಿದವರಾಗಿದ್ದು, ಅಂತಹ ಕುಟುಂಬದಲ್ಲಿ ವಿಕಲಚೇತನ ಮಗುವಿನ ಜನನವಾದರೆ ಆಕಾಶವೆ ಕಳಚಿ ತಲೆಮೇಲೆ ಬಿದಂತೆ ಆಗುತ್ತದೆ. ಇವರ ಅಭಿವೃದ್ಧಿಗಾಗಿ ಸೇವಾ ಸಂಗಮ ಸಂಸ್ಥೆ ಹಾಗೂ ಸಂಸ್ಥೆಯ ಕಾರ್ಯಕರ್ತರು ಹಗಲಿರುಳು ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ. ಇಂತಹ ಮಕ್ಕಳ ಏಳಿಗೆಗಾಗಿ ಅವರ ಉತ್ತಮ ಭವಿಷ್ಯಕ್ಕಾಗಿ ಸಂಸ್ಥೆಯ ವತಿಯಿಂದ ಶ್ರವಣ ನ್ಯೂನತೆಯುಳ್ಳ ಮಕ್ಕಳಿಗೆ ಶ್ರವಣ ಸಾಧನ ಸಲಕರಣೆಗಳನ್ನು ನೀಡುವ ಮೂಲಕ ಆ ಮಗುವನ್ನು ಶ್ರವಣ ನ್ಯೂನತೆಯಿಂದ ಮುಕ್ತಗೊಳಿಸುವ ಕಾರ್ಯವನ್ನು ಸಂಸ್ಥೆಯಿಂದ ಮಾಡಲಾಗುತ್ತಿದೆ. ಇದನ್ನು ಪಡೆದುಕೊಂಡ ಮಕ್ಕಳು ಹಾಗೂ ಪಾಲಕರು ಉತ್ತಮ ರೀತಿಯಲ್ಲಿ ಬಳಸಿಕೊಂಡು ಉತ್ತಮ ಸಮಾಜ, ಆರೋಗ್ಯಯುತವಾದ ಸಮಾಜ, ವಿಕಲಾಂಗತೆ ಮುಕ್ತ ಸಮಾಜ ನಿರ್ಮಾಣಕ್ಕೆ ನಾಂದಿ ಹಾಡಬೇಕಿದೆ ಎಂದರು. ಶ್ರೀಮತಿ ಗೀತಾ ಎಚ್ ಆಡಳಿತ ವೈಧ್ಯಾಧಿಕಾರಿಗಳು ಪ್ರಾಥಮಿಕ ಆರೋಗ್ಯ ಕೇಂದ್ರ ಹೊನ್ನಕಿರಣಗಿ ಇವರು ಕಾರ್ಯಕ್ರಮವನ್ನು ಉದ್ದೇಶಿ ಮಾತನಾಡುತ್ತಾ “ಕಾಯಕವೇ ಕೈಲಾಸ” ಕರ್ತವ್ಯವೇ ಪರಮೋದ್ದೇಶ ಎಂಬ ಮಾತಿನಂತೆ ಸೇವಾ ಸಂಗಮ ಸಂಸ್ಥೆ ತಮ್ಮ ಕಾರ್ಯದಲ್ಲಿ ಕೈಲಾಸವನ್ನು ಕಾಣುತ್ತ ವಿಕಲಾಂಗ ಮಕ್ಕಳ ಏಳಿಗೆಗಾಗಿ ನಿಸ್ವಾರ್ಥ ಸೇವೆ ಸಲ್ಲಿಸುತ್ತಿದ್ದಾರೆ ಎಂದು ನುಡಿಯುತ್ತಾ, ವಿಕಲಾಂಗ ಮಕ್ಕಳನ್ನು ಸಮಾಜದ ಮುಖ್ಯವಾಹಿನಿಗೆ ತರುವುದೇ ಪರಮೋದ್ದೇಶವಾಗಿದೆ ಎಂಬುವುದು ಅವರ ಕಾರ್ಯದಲ್ಲಿ ಎದ್ದು ಕಾಣುತ್ತಿದೆ ಅವರ ಪ್ರಾಮಾಣಿಕತೆಯ ಎಲ್ಲಾ ನೈತಿಕ ಗುಣಗಳ ಮೊತ್ತ ಎಂಬಂತೆ ಸಂಸ್ಥೆ ಸಮಾಜದ ಅಭಿವೃದ್ಧಿಗಾಗಿ ಕಾರ್ಯವನ್ನು ನಿರ್ವಹಿಸುತ್ತಿದೆ ಎಂದು ಹೇಳಿದರು.



**ಕಾರ್ಯಕ್ರಮದ ವೇದಿಕೆಯಲ್ಲಿ ಫಾದರ ವಿಕ್ಟರ ವಾಸ್ ನಿರ್ದೇಶಕರು, ಸೇವಾಸಂಗಮ ಸಂಸ್ಥೆ ಹಾಗೂ ಶ್ರೀಮತಿ ಸುನಿತಾ ಪಾಟಿಲ್ ಪ್ರಾಥಮಿಕ ಆರೊಗ್ಯ ಕೇಂದ್ರ ಹೋನ್ನಕಿರಣಗಿ ಇವರು ಉಪಸ್ಥಿತರಿದ್ದರು.**



## “ಮಕ್ಕಳ ಪಾಲಕರಿಗೆ ಅರಿವನ್ನು ನೀಡುವ ಕಾರ್ಯಕ್ರಮ”



ಶ್ರೀ ವಿರೂಪಾಕ್ಷಯ್ಯಾ ಹಿರೇಮಠ ಆರೋಗ್ಯ ನಿರೀಕ್ಷಣ ಅಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ, ಫರಹತಬಾದ ಇವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ ಸೇವಾ ಸಂಗಮ ಸಂಸ್ಥೆಯ ಸೇವೆಯು ಶ್ಲಾಘನಿಯವಾಗಿದೆ. ಬೇಳವಣಿಗೆಯಲ್ಲಿ ಕುಂಠಿತ ಗೊಂಡಿರುವ ಮಕ್ಕಳನ್ನು ಗುರುತಿಸುವುದು ಹಾಗೂ ಅಂತಹ ಮಕ್ಕಳ ಪಾಲಕರಿಗೆ ಅರಿವನ್ನು ನೀಡುವ ಮೂಲಕ ಅಂತಹ ಮಕ್ಕಳ ವಿಶ್ಲೇಷಣೆಯನ್ನು ಮಾಡಿ ಮಗುವಿಗೆ ಇರುವ ನ್ಯೂನತೆಯನ್ನು ಗುರುತಿಸಿ ಆ ನ್ಯೂನತೆಗೆ ತಕ್ಕ ಉತ್ತೇಜಕ ಚಟುವಟಿಕೆಯನ್ನು ನೀಡುವ ಮೂಲಕ ಮಕ್ಕಳಲ್ಲಿ ಬದಲಾವಣೆಯನ್ನು ತರುವ ಕಾರ್ಯವನ್ನು ಈ ಸಂಸ್ಥೆಯವರು ಮಾಡುತ್ತಿರುವುದು ನಿಜಕ್ಕೂ ಶ್ಲಾಘನಿಯವಾದ ಕಾರ್ಯವಾಗಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಶ್ರೀಮತಿ ಗಂಗಬಾಯಿ ಪ್ರಾಥಮಿಕ ಆರೋಗ್ಯ ಕೇಂದ್ರ ಫರಹತಬಾದ, ಶ್ರೀಮತಿ ನೇತ್ರಾ ಸಂಪನ್ಮೂಲ ವ್ಯಕ್ತಿಗಳು ಸಕ್ಯ ಫೌಂಢಶನ್ ಬೆಂಗಳೂರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಈ ತರಬೇತಿ ಕಾರ್ಯಗಾರದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಫರಹತಬಾದ ಮತ್ತು ಹೊನ್ನಕಿರಣಗಿಯ ವ್ಯಾಪ್ತಿಗೆ ಬರುವ ಆಶಾ ಕಾರ್ಯಕರ್ತೆಯರು ಹಾಗೂ ಸಿಬ್ಬಂದಿ ವರ್ಗದವರು ಸೇರಿ ಒಟ್ಟು 60 ಜನರು ಭಾಗವಹಿಸಿದರು.

## ಮಕ್ಕಳ ಸಹಾಯವಾಣಿ 1098

ಪಟ್ಟಣದ ಪ್ರೌಢ ಶಾಲೆಯಲ್ಲಿ ಶಿಕ್ಷಕಿ ಅಂಜನಾ ಅವರ ನೇತೃತ್ವದಲ್ಲಿ ಸೇವಾ ಸಂಗಮ ಸಂಸ್ಥೆಯು ಮಕ್ಕಳ ಸಹಾಯವಾಣಿ ಕುರಿತು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಇಂದಿನ ಮಕ್ಕಳೇ ನಾಳೆಯ ಪ್ರಜೆಗಳು ಎನ್ನುವಂತೆ ಮಕ್ಕಳ ಸಹಾಯವಾಣಿ ಸೇವೆಯು 18 ವರ್ಷದೋಳಗಿನ ಮಕ್ಕಳಿಗೆ ದಿನದ 24 ಗಂಟೆಗಳ ಕಾಲ ಔಟರೀಚ್ ಹಾಗೂ ದೂರವಾಣಿ ಸೇವೆಗಳ ಮೂಲಕ ಆರೈಕೆ ರಕ್ಷಣೆ ಹಾಗೂ ಪೋಷಣೆಯನ್ನು ಒದಗಿಸುವ ಉಚಿತ ಕರೆಯಾಗಿದೆ. ಮಕ್ಕಳ ಪಾಲನೆ ಮತ್ತು ರಕ್ಷಣೆ ಕಾಯ್ದೆ 2015 ರ ಕಲಂನಂತೆ ಈ ಯೋಜನೆಯು ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಕಾರ್ಯನಿರ್ವಹಿಸುತ್ತದೆ. ಮಕ್ಕಳ ಹಕ್ಕುಗಳಾದ ಬದುಕುವ ಹಕ್ಕು, ರಕ್ಷಣೆಯ ಹಕ್ಕು, ವಿಕಾಸ ಹೊಂದುವ ಹಕ್ಕು, ಭಾಗವಹಿಸುವ ಹಕ್ಕು ಇವುಗಳು ಮಕ್ಕಳ ಹಕ್ಕುಗಳಾಗಿದ್ದು, ಮಕ್ಕಳ ಸಹಾಯ ವಾಣಿಯು ತುರ್ತು ಅಗತ್ಯತೆಗೆ ಸ್ಪಂದಿಸುವ ಜೊತೆಗೆ ಮುಂದಿನ ದಿನಗಳಲ್ಲಿ ಆ ಮಕ್ಕಳಿಗೆ ಬೇಕಾಗುವ ಸಹಾಯವನ್ನು ನೀಡಬಲ್ಲ ಪುನರ್ರ ವಸತಿ ಸೌಲಭ್ಯಗಳನ್ನು ಒದಗಿಸುತ್ತದೆ. ಇಲ್ಲಿಯ ತನಕ ಸಾವಿರಾರು ಮಕ್ಕಳು ಇದರ ಸದುಪಯೋಗವನ್ನು ಪಡೆದುಕೊಂಡಿದ್ದಾರೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯವು ಭಾರತದ್ಯಾದಂತ ಮಕ್ಕಳ ಸಹಾಯವಾಣಿ ನಿರ್ವಹಿಸುವ ಮೇಲ್ವಿಚಾರಣೆ ಮಾಡುವ ಮಾತ್ರ ಸಂಸ್ಥೆಯಾಗಿದೆ.



# ಸುದ್ದಿ ಪತ್ರಿಕೆಯಲ್ಲಿ ಪ್ರಕಟಿಸಲಾದ ಆರ್ಬಿಟ್ ಸಂಸ್ಥೆ ಮತ್ತು ಸೇವಾ ಸಂಘಮ ಸಂಸ್ಥೆ ಕಾರ್ಯ

Read, Discuss & Debate With Editor, Dr. N Prashant Rao
ಭಾರತ ವೈಭವ
New Delhi RNI Reg.No.51768
bv 16.1.2024 (8)-7
16 Jan 2024
ಕನ್ನಡ ದಿನಪತ್ರಿಕೆ
bharathvaibhav.com 94826 33333 bvdaily2013@gmail.com Bharat Vaibhav Daily
POWERED BY. KHUSHI HOST

## ಸಂವಿಧಾನದ ಅಡಿಯಲ್ಲಿ ಎಲ್ಲರೂ ಸಮಾನರು

ಭಾರತ ವೈಭವ ಸುದ್ದಿ



**ಹುಮನಾಬಾದ:** ತಾಲೂಕಿನ ಹುಡಗಿ ಗ್ರಾಮದಲ್ಲಿ ದಿನಾಂಕ 13-1-2024 ರಂದು ಆರ್ಬಿಟ್ ಸಂಸ್ಥೆ ಮಹಿಳಾಭಿವೃದ್ಧಿ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀಮತಿ ಸವಿತಾ ಅವರು ಆಯೋಜಿಸಿದ್ದ ಸಂವಿಧಾನಿಕ ಹಕ್ಕುಗಳ ತರಬೇತಿಯಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಪ್ರಭು ಮಾಲೆಯವರು ಸ್ವಸಹಾಯ ಸಂಘದ ಸದಸ್ಯರಿಗೆ ಸಂವಿಧಾನ ಎಂದರೇನು?ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಎಲ್ಲಾ ಧರ್ಮದವರಿಗೂ ಒಂದೇ ಸಂವಿಧಾನವನ್ನು ರಚಿಸಿದ್ದಾರೆ. ಅದರಲ್ಲಿ ವಿಶೇಷವಾಗಿ ಮಹಿಳೆಯ-ರಿಗೆ ಸಮಾಜದಲ್ಲಿ ಉತ್ತಮ ಸ್ಥಾನಮಾನ ಕಲ್ಪಿಸುವಲ್ಲಿ ಅವರ ಪಾತ್ರ ಮಹತ್ವದಾಗಿದೆ.

ಹಿಂದಿನ ಕಾಲದಲ್ಲಿ ರಾಜ ಮನೆತನದವರೇ ಆಳ್ವಿಕೆಯನ್ನು ನಡೆಸುತ್ತಿದ್ದರು, ಆದರೆ ಸಂವಿಧಾನದಲ್ಲಿ ಎಲ್ಲರೂ ಸಮಾನರು ಪ್ರತಿಯೊಬ್ಬರು ಶಿಕ್ಷಣವನ್ನು ಪಡೆಯಬೇಕು, ರಾಜ-ಕೀಯವಾಗಿ ಭಾಗವಹಿಸಬೇಕು, ಮಕ್ಕಳಿಂದ ವಯಸ್ಕರವರೆಗೂ ಕಾನೂನು ರಚನೆಗೊಂಡಿದೆ.

ಪ್ರಜೆಗಳಿಂದ ಪ್ರಜೆಗಳಿಗಾಗಿ ಪ್ರಜೆಗಳಿಗೋಸ್ಕರ ಇರುವ ಸರ್ಕಾರದ ವ್ಯವಸ್ಥೆಯನ್ನು ಪ್ರಜಾಪ್ರಭುತ್ವ ಸರಕಾರ ಎಂದು ಕರೆಯುತ್ತಾರೆ.

ಸಂವಿಧಾನದಲ್ಲಿ ಮೂರು ಅಂಗಗಳಿವೆ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಇವುಗಳ ಅಡಿಯಲ್ಲಿ ರಚಿಸಲ್ಪಟ್ಟಿದೆ. ಕಾನೂನನ್ನು ಅನುಷ್ಠಾನಕ್ಕೆ ತರಲು ಹಕ್ಕುಗಳ ಉಲ್ಲಂಘನೆ ಯಾಗದಂತೆ ತಡೆಯಲು ಇವುಗಳು ಕಾರ್ಯನಿರ್ವಹಿಸುತ್ತವೆ ಎಂದು ಹೇಳಿದರು.ಈ ಸಂದರ್ಭದಲ್ಲಿ ಹದಿನೈದಕ್ಕೂ ಅಧಿಕ ಸದಸ್ಯರು ಭಾಗವಹಿಸಿ ಸಂವಿಧಾನದ ಮಹತ್ವದ ಕುರಿತು ಮಾಹಿತಿಯನ್ನು ತಿಳಿದುಕೊಂಡರು.

ಪ್ರಜಾವಾಣಿ



ಹುಮನಾಬಾದ್ ಪಟ್ಟಣದ ಹೊರವಲಯದ ಆರ್ಬಿಟ್ ಸಂಸ್ಥೆಯಲ್ಲಿ ಆಯೋಜಿಸಿದ್ದ ಸೌಹಾರ್ದ ಕೂಟದಲ್ಲಿ ಶಾಸಕ ಸಿದ್ದಲಿಂಗಪ್ಪ ಪಾಟೀಲ ಮಾತನಾಡಿದರು

## ಸೌಹಾರ್ದ ಕೂಟಕ್ಕೆ ಶಾಸಕ ಚಾಲನೆ

ಪ್ರಜಾವಾಣಿ ವಾರ್ತೆ

**ಹುಮನಾಬಾದ್:** ಆರ್ಬಿಟ್ ಸಂಸ್ಥೆಯಿಂದ ಅನೇಕ ವರ್ಷಗಳಿಂದ ಸಮಾಜ ಮುಖಿ ಕಾರ್ಯಗಳು ನಡೆಯುತ್ತಿವೆ ಎಂದು ಶಾಸಕ ಡಾ.ಸಿದ್ದಲಿಂಗಪ್ಪ ಪಾಟೀಲ ತಿಳಿಸಿದರು.

ಪಟ್ಟಣದ ಹೊರವಲಯದ ಆರ್ಬಿಟ್ ಸಂಸ್ಥೆಯಲ್ಲಿ ಆಯೋಜಿಸಿದ್ದ ಸೌಹಾರ್ದ ಕೂಟದಲ್ಲಿ ಅವರು ಮಾತನಾಡಿದರು.

ಕ್ರಿಸ್ಮಸ್ ಹಬ್ಬದ ನಿಮಿತ್ತ ಸಂಸ್ಥೆಯ ವತಿಯಿಂದ ಎಲ್ಲಾ ಧರ್ಮದವರನ್ನು ಸೇರಿಸಿ ಹಬ್ಬ ಆಚರಿಸುವುದು ಹೆಮ್ಮೆಯ ವಿಷಯವಾಗಿದೆ ಎಂದರು.

ಫಾದರ್ ಡಿಸೋಜಾ, ಮೈಕಲ್ ಮಿರಂದಾ , ವಿಕ್ಟರ್ ವಾಸ್ , ಶೇಕ್ ಜಾಕಿರ್ ಹುಸೇನ್, ಮಂದಾಕಿನಿ ಬಹೆನಜಿ , ರವಿ, ಅಮಿತಾ ಸೇರಿದಂತೆ ಇತರರು ಇದ್ದರು.

## ‘ರೈತರು ಒಗ್ಗಟ್ಟಿನಿಂದ ಹೋರಾಡಿ’



ಕಲಬುರಗಿ: ‘ರೈತರು ಒಗ್ಗಟ್ಟಿನಿಂದ ಹೋರಾಟ ಮಾಡುವ ಮೂಲಕ ಹಕ್ಕುಗಳನ್ನು ಪಡೆಯಬೇಕು’ ಎಂದು ಧರ್ಮಗುರು ಫಾದರ್ ಸ್ಟ್ಯಾನಿ ಲೋಬೊ ಹೇಳಿದರು.

ಸೇವಾ ಸಂಗಮ ಸಂಸ್ಥೆ ಮತ್ತು ಕಾರಿತಾಸ್ ಇಂಡಿಯಾ ಸಂಸ್ಥೆಯ ಸಹಯೋಗದಲ್ಲಿ ನಗರದಲ್ಲಿ ನಡೆದ ರಾಷ್ಟ್ರೀಯ ರೈತ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ರೈತರು ಸಿರಿಧಾನ್ಯ ಹಾಗೂ ಸಾವಯವ ಕೃಷಿಯ ಮೂಲಕ ಆರ್ಥಿಕತೆ ಬಲಪಡಿಸಬೇಕು. ಸ್ವಯಂ ಸೇವಕರು ಹಳ್ಳಿಗಳ ಬದಲಾವಣೆಗೆ ಶ್ರಮಿಸಬೇಕು. ಇದರಿಂದ ದೇಶದ ಪ್ರಗತಿ ಸಾಧ್ಯ ಎಂದು ತಿಳಿಸಿದರು.

ಕೃಷಿ ಇಲಾಖೆ ತಾಂತ್ರಿಕ ವ್ಯವಸ್ಥಾಪಕ ಶಿವರಾಯ ಅವರು ಇಲಾಖೆಯಿಂದ ರೈತರಿಗೆ ಸಿಗುವ ಸರ್ಕಾರಿ ಸೌಲಭ್ಯಗಳ ಕುರಿತು ಮಾಹಿತಿ ನೀಡಿದರು.

ಸೆಲ್ಕೊ ಕಂಪನಿಯ ಕಲ್ಯಾಣ ಕರ್ನಾಟಕ ವಿಭಾಗದ ವ್ಯವಸ್ಥಾಪಕ ಯಲ್ಲಾಲಿಂಗ ಮಾತನಾಡಿದರು.

ಇದೇ ಸಂದರ್ಭದಲ್ಲಿ ಪ್ರಗತಿಪರ ರೈತರು ಮತ್ತು ಸ್ವಯಂ ಸೇವಕರನ್ನು ಸನ್ಮಾನಿಸಲಾಯಿತು.

ಫರಹತಾಬಾದ್, ನಂದಿಕೂರ, ನಂದೂರ (ಕೆ) ಗ್ರಾಮಗಳ ರೈತರು ಭಾಗವಹಿಸಿದ್ದರು.

ಸೇವಾ ಸಂಗಮ ಸಂಸ್ಥೆ ನಿರ್ದೇಶಕ ಫಾ.ವಿಕ್ಟರ್ ವಾಸ್, ಸಹ ನಿರ್ದೇಶಕ ಫಾ.ದೀಪಕ್, ಉಜ್ಜೀವನ ಕಾರ್ಯಕ್ರಮದ ಸಂಯೋಜಕ ಚಂದ್ರಕಾಂತ ಮೂಲಿಮನಿ ಉಪಸ್ಥಿತರಿದ್ದರು.

ನಂದಿನಿ ನಿರೂಪಿಸಿದರು.

# ಸೇವಾ ಸಂಗಮ ಮತ್ತು ಆರ್ಬಿಟ್ ಸಂಸ್ಥೆ (NGO)
# ಗುಲ್ಬರ್ಗಾ ಧರ್ಮಕ್ಷೇತ್ರ

## Appeal

ಗುಲ್ಬರ್ಗಾ ಧರ್ಮ ಕ್ಷೇತ್ರವು ಉತ್ತರ ಕರ್ನಾಟಕದ ಹಿಂದುಳಿದ ಜಿಲ್ಲೆಗಳಾದ ಬೀದರ್, ಬಿಜಾಪುರ್, ಯಾದಗಿರಿ ಹಾಗೂ ಗುಲ್ಬರ್ಗಾ ಜಿಲ್ಲೆಗಳನ್ನು ಒಳಗೊಂಡಿದೆ. ಗುಲ್ಬರ್ಗಾ ಧರ್ಮಕ್ಷೇತ್ರವು ಉಗಮ ಆಗುವುದಕ್ಕಿಂತ ಮುಂಚೆ ಮಂಗಳೂರು ಧರ್ಮಕ್ಷೇತ್ರದಿಂದ ಗುರುಗಳು ಹಾಗೂ ಕನ್ಯಾ ಭಗಿನಿಯರು ಬೀದರ್ ಜಿಲ್ಲೆಯ ಸರ್ವತೋಮುಖ ಬೆಳವಣಿಗೆಗಾಗಿ ಶ್ರಮಿಸಿದ್ದಾರೆ. ಆರ್ಬಿಟ್ ಸಮಾಜ ಸೇವಾ ಸಂಸ್ಥೆಯ ಮುಖಾಂತರ *1993* ರಿಂದ ಆರೋಗ್ಯ, ಶಿಕ್ಷಣ, ಮಹಿಳಾ ಸಬಲೀಕರಣ, ಅಂಗವಿಕಲರ ಸಬಲೀಕರಣ ಹಾಗೂ ನಿರ್ಗತಿಕರಿಗೆ ಆಸರೆ ಒದಗಿಸುವ ಕೆಲಸವನ್ನು ಮಾಡಿದ್ದಾರೆ. ಹಾಗೆ *2005*ನೇ ಇಸವಿಯಲ್ಲಿ ಗುಲ್ಬರ್ಗಾ ಧರ್ಮಕ್ಷೇತ್ರ ಉಗಮವಾದಾಗಿನಿಂದ ಈ ಸಮಾಜ ಸೇವಾ ಕೆಲಸವನ್ನು ನಾಲ್ಕು ಜಿಲ್ಲೆಗಳಲ್ಲಿ ಕೈಗೊಳ್ಳಲಾಯಿತು. ಸೇವಾ ಸಂಗಮ ಹಾಗೂ ಆರ್ಬಿಟ್ ಸಂಸ್ಥೆಗಳ ಮುಖಾಂತರ ಮಹಿಳಾ ಸಬಲೀಕರಣ, ಮಕ್ಕಳ ಶಿಕ್ಷಣ, ಅಂಗವಿಕಲರ ಕಾರ್ಯಕ್ರಮ, ಪರಿಸರ ಸಂರಕ್ಷಣೆ, ನಿರುದ್ಯೋಗಿಗಳಿಗೆ ಕೌಶಲ್ಯ ತರಬೇತಿ, ಮಾನಸಿಕ ಅಸ್ವಸ್ಥರಿಗೆ ಪುನರ್ವಸತಿ, ಎಂಟು ವರ್ಷಕ್ಕಿಂತ ಕೆಳಗಿನ ಬೆಳವಣಿಗೆಯಲ್ಲಿ ಕುಂಠಿತ ಹೊಂದಿದ ಮಕ್ಕಳಿಗೆ ಚಿಕಿತ್ಸೆ, ನೈಸರ್ಗಿಕ ವಿಪತ್ತು ನಿವಾರಣೆ, ಕ್ಯಾನ್ಸರ್ ಜಾಗೃತಿ ಆಂದೋಲನ, ಹೀಗೆ ಸಮಾಜದಿಂದ ಹಂಚಿಕೆ ತಳ್ಳಲ್ಪಟ್ಟ ಜನರಿಗೆ ಪುರ್ನವಸತಿ ನೀಡುವ ಕೆಲಸವನ್ನು ಈ ಎರಡು ಸಂಸ್ಥೆಗಳು ಮಾಡುತ್ತಿವೆ. ಹಲವಾರು ಕಾರ್ಯಕ್ರಮಗಳ ಮುಖಾಂತರ ನಮ್ಮ ಎರಡು ಸಂಸ್ಥೆಗಳು ಬಡವರಿಗೆ, ನಿರ್ಗತಿಕರಿಗೆ, ಶೋಷಿತರಿಗೆ, ಹಾಗೂ ವಿವಿಧ ಶೋಷಣೆಗಳಿಗೆ ಒಳಗಾದ ಜನರಿಗೆ ಸ್ಫೂರ್ತಿ, ಶಕ್ತಿ, ಹಾಗೂ ಜೀವವನ್ನು ತುಂಬುತ್ತವೆ. ಈ ಸೇವೆಗಳನ್ನು ಹೆಚ್ಚು ಜನರಿಗೆ ತಲುಪಿಸಲು, ನಿಮ್ಮ ಸಹಾಯ ಹಸ್ತವನ್ನು ಹಾಗೂ ನಮ್ಮೊಂದಿಗೆ ಸೇರಿ ಸುಂದರ ಸಮಾಜವನ್ನು ಕಟ್ಟಲು ನಿಮ್ಮ ನೆರವನ್ನು ಅಪೇಕ್ಷಿಸುತ್ತವೆ.

ಬನ್ನಿ ಉತ್ತಮ ಸಮಾಜವನ್ನು ಕಟ್ಟೋಣ.



ನಿಮ್ಮ ಸಹಾಯದಿಂದ ಗುಲ್ಬರ್ಗಾ ಹಾಗೂ ಬೀದರ, ಕೋಟಗೇರಿ ನಿವಾಸ ಮಕ್ಕಳು ಉತ್ತಮ ಶಿಕ್ಷಣ ಪಡೆಯುತ್ತಾರೆ.

ಪ್ರಾಯೋಜಕರು ಒಂದು ಟ್ಯೂಷನ್ ಸೇಂಟರ್
ಪ್ರತಿ ತಿಂಗಳು 4000/- ವರ್ಷಕ್ಕೆ 40,000/-



ನಿಮ್ಮ ಸಹಾಯದಿಂದ ವಿಶೇಷ ಚೇತನ ಮಕ್ಕಳು ತಮ್ಮ ಸಾಮರ್ಥ್ಯ ಹಾಗೂ ಕೌಶಲ್ಯಗಳು ಕಂಡುಕೊಳ್ಳುತ್ತಾರೆ.

ಪ್ರಾಯೋಜಕರು ಒಂದು ಮಗು
ರೂ.500 ಪ್ರತಿ ತಿಂಗಳು / ವರ್ಷಕ್ಕೆ 6000/-

ನೀವು ಧನ ಸಹಾಯ ಮಾಡಿದ ಮೇಲೆ ನಿಮ್ಮ ವಿಳಾಸ ಮತ್ತು PAN *number* ಕೆಳಗಿರುವ ಸಂಖ್ಯೆಗೆ *WhatsApp* ಮಾಡುವುದು.

**(Only for Indian Citizens)**

**Bank Account Details**

DONATE NOW

| | |
|---|---|
| Name | : Sevasangama Development Society |
| Account No | : 16040100022902 |
| IFSC Code | : FDRL0001604 |
| Bank | : Federal Bank |
| Branch | : Super Market Kalaburagi |

**Fr. Victor Anil Vas**
Director, Seva Sangama & ORBIT


Address

Seva Sangama Development Society, Near Kendriya Vidyalaya, Kotnoor D, Kalaburagi, Karnataka-585102
Contact: 8660968063 / 9743112739 - Email: sevasangama2006@gmail.com / Website: www.sevasangama.in